೪೦೪

ಗ್ರಾಮೀಣ ಜನತೆ ಹಾಗೂ ರಾಜಕೀಯ ಚಿಂತನೆ

ಎಲ್. ಎಚ್. ಕಲ್ಮಠ

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ

ಡಿಶೆಂಬರ, ೧೯೯೧

ಉಪನ್ಯಾಸ ಗ್ರಂಥಮಾಲೆ

೪೦೪

ಗ್ರಾಮೀಣ ಜನತೆ ಹಾಗೂ ರಾಜಕೀಯ ಚಿಂತನೆ

ಎಲ್. ಎಚ್. ಕಲ್ಮಠ

ಪ್ರಸಾರಾಂಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
ಡಿಸೆಂಬರ್, ೧೯೯೧

ಪ್ರಕಾಶಕರು :

ಪ್ರೊ. ಸದಾನಂದ ಕನವಳ್ಳಿ
ನಿರ್ದೇಶಕರು
ಪ್ರಸಾರಾಂಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಪ್ರಥಮ ಮುದ್ರಣ : ಡಿಶೆಂಬರ, ೧೯೬೧
೫,೦೦೦ ಪ್ರತಿಗಳು

ಬೆಲೆ : ರೂ. ೧–೦೦

ಮುದ್ರಕರು :

ಜಿ. ಬಿ. ಮನ್ವಾಚಾರ
ನಿರ್ದೇಶಕರು
ಕರ್ನಾಟಕ ವಿಶ್ವವಿದ್ಯಾಲಯ ಮುದ್ರಣಾಲಯ
ಧಾರವಾಡ

ಮುನ್ನುಡಿ

ಕರ್ನಾಟಕ ವಿಶ್ವವಿದ್ಯಾಲಯವು ತನ್ನ ಪ್ರಸಾರಾಂಗದ ಮುಖಾಂತರ ಕೈಕೊಂಡು ನಡೆಸುತ್ತಿರುವ ಜ್ಞಾನಪ್ರಸಾರದ ಯೋಜನೆಗಳಲ್ಲಿ ಈ 'ಉಪನ್ಯಾಸ ಗ್ರಂಥಮಾಲೆ' ಅತ್ಯಂತ ಮುಖ್ಯವೂ, ಜನಪ್ರಿಯವೂ ಆಗಿರುವುದು ಹೆಮ್ಮೆಯ ಮಾತಾಗಿದೆ. ವಿಶ್ವವಿದ್ಯಾಲಯದ ಆಡಳಿತ ಕ್ಷೇತ್ರದಲ್ಲಿರುವ ನಾಲ್ಕು ಜಿಲ್ಲೆಗಳಲ್ಲಿಯೂ ಉಪನ್ಯಾಸ ಶಿಬಿರಗಳನ್ನು ಏರ್ಪಡಿಸಲಾಗುತ್ತಿದ್ದು, ವಿಶ್ವವಿದ್ಯಾಲಯದ ಮತ್ತು ಇದಕ್ಕೆ ಸೇರಿದ ಕಾಲೇಜುಗಳ ಪ್ರಾಧ್ಯಾಪಕರು ಸಾಹಿತ್ಯ, ವಿಜ್ಞಾನ, ಸಾಮಾಜಿಕಶಾಸ್ತ್ರ ಮೊದಲಾದ ಶಾಖೆಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಆಯ್ದುಕೊಂಡು, ಶಾಸ್ತ್ರಸಮ್ಮತವಾದ ಸರಣಿಯಲ್ಲಿ, ಜನಸಾಮಾನ್ಯರಿಗೆ ತಿಳಿಯುವ ಶೈಲಿಯಲ್ಲಿ ಈ ಶಿಬಿರಗಳಲ್ಲಿ ಉಪನ್ಯಾಸಗಳನ್ನು ಕೊಡುತ್ತಾರೆ. ವಿಶ್ವವಿದ್ಯಾಲಯದ ಜ್ಞಾನ ಭಂಡಾರದ ಅಲ್ಪಾಂಶವನ್ನಾದರೂ ಮಹಾಜನರ ಮನೆ ಬಾಗಿಲಿಗೆ ಒಯ್ದು ಮುಟ್ಟಿಸಬೇಕೆಂದು ಮಾಡಿದ ಈ ಪ್ರಯತ್ನಕ್ಕೆ ನಮ್ಮ ನಿರೀಕ್ಷೆಗೆ ಮೀರಿದ ಮೆಚ್ಚಿಕೆಯೂ, ಪ್ರೋತ್ಸಾಹವೂ ದೊರೆಯುತ್ತಿವೆ. ಜನರು ತಾವಾಗಿಯೇ ಮುಂದೆ ಬಂದು ತಮ್ಮ ತಮ್ಮ ಊರುಗಳಲ್ಲಿ ಈ ಉಪನ್ಯಾಸಗಳನ್ನು ಏರ್ಪಡಿಸಲು ವಿಶ್ವವಿದ್ಯಾಲಯಕ್ಕೆ ಬರೆದು ಬಿನ್ನವಿಸಿಕೊಳ್ಳುತ್ತಿರುವುದು ನಿಜವಾಗಿಯೂ ಸಂತೋಷದ ಸಂಗತಿಯಾಗಿದೆ.

ಈ ಜ್ಞಾನಪ್ರಸಾರ ಕಾರ್ಯದಲ್ಲಿ ಭಾಗವಹಿಸುವದರಿಂದ
ವಿಶ್ವವಿದ್ಯಾಲಯದ ಹಾಗೂ ಕಾಲೇಜುಗಳ ಅಧ್ಯಾಪಕರಿಗೆ ಆಯಾ
ಪ್ರದೇಶದ ಜನತೆಯೊಡನೆ ಹೆಚ್ಚಿನ ಸಂಪರ್ಕ ಒದಗುವದಲ್ಲದ
ಎಂತಹ ವಿಷಯವನ್ನಾದರೂ ಕನ್ನಡದಲ್ಲಿ ತಿಳಿಸಿ ಹೇಳುವ ಹಾಗೂ
ಅದನ್ನು ಸುಲಭ ಶೈಲಿಯಲ್ಲಿ ಬರವಣಿಗೆಯಲ್ಲಿಳಿಸುವ ಅವಕಾಶ
ದೊರೆಯುತ್ತದೆ. ಈ ಕಾರ್ಯದಲ್ಲಿ ಅವರೆಲ್ಲರೂ ಮನಮುಟ್ಟಿ
ಸಹಕರಿಸುತ್ತಿರುವುದು ಶ್ಲಾಘನೀಯ.

ಈ ಮಾಲೆಯಲ್ಲಿ ಈಗಾಗಲೇ ೪೦೩ ಪುಸ್ತಿಕೆಗಳು ಪ್ರಕಟ
ವಾಗಿವೆ. ಅವು ಅಚ್ಚಾಗಿ ಹೊರಬಂದೊಡನೆ ಅವುಗಳ ಸಾವಿರಾರು
ಪ್ರತಿಗಳನ್ನು ಜನರು ಕೊಂಡು ಓದುತ್ತಾರೆ. ಅನೇಕ ಪುಸ್ತಿಕೆಗಳು
ನಾಲ್ಕು-ಐದು ಮುದ್ರಣಗಳನ್ನು ಕಂಡಿರುವುದು ಈ ಮಾಲೆಯ
ಉಪಯುಕ್ತತೆಯನ್ನೂ ಜನಪ್ರಿಯತೆಯನ್ನೂ ವ್ಯಕ್ತಗೊಳಿಸುತ್ತದೆ.
ಇದು ನಾಡಿನ ಪ್ರಗತಿಯ ಚಿಹ್ನೆಯೆಂದು ಭಾವಿಸುತ್ತೇನೆ.

ವಿಶ್ವವಿದ್ಯಾಲಯದ ಈ ಸೇವೆಯ ಸಂಪೂರ್ಣ ಪ್ರಯೋಜನ
ಪಡೆದು ಸಾಮಾನ್ಯ ಜನತೆ ನಾಡಿನ ಸರ್ವತೋಮುಖ ಪ್ರಗತಿಯಲ್ಲಿ
ಪಾಲುಗೊಳ್ಳಲೆಂದು ಹಾರೈಸುತ್ತೇನೆ.

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ

ಎಸ್. ರಾಮೇಗೌಡ
ಕುಲಪತಿಗಳು

ಅರಿಕೆ

ಮಹಾವಿದ್ಯಾಲಯ ಹಾಗೂ ವಿಶ್ವವಿದ್ಯಾಲಯಗಳಲ್ಲಿ ಕಲಿಸುವ ಜ್ಞಾನವನ್ನು ಗ್ರಾಮೀಣ ಜನತೆಗೂ ಮುಟ್ಟಿಸುವ ಸದುದ್ದೇಶದಿಂದ ವಿಶ್ವವಿದ್ಯಾಲಯದ ಪ್ರಸಾರಾಂಗ ವಿಭಾಗವು ಗ್ರಾಮೀಣ ಪ್ರದೇಶಗಳಲ್ಲಿ ನಾನಾ ವಿಷಯಗಳ ಕುರಿತು ಉಪನ್ಯಾಸಗಳನ್ನೇರ್ಪಡಿಸಿ ಗ್ರಾಮೀಣ ಜನರ ಕೃತಜ್ಞತೆಗೆ ಪಾತ್ರವಾಗಿದೆ. ಪ್ರಸಾರಾಂಗದ ೩೭೬ ನೆಯ ಉಪನ್ಯಾಸ ಶಿಬಿರವು ೧೯೮೮ ಮಾರ್ಚ ೨೧ ಹಾಗೂ ೨೨ ರಂದು ವಿಜಾಪೂರ ಜಿಲ್ಲಾ ಬಸವನ ಬಾಗೇವಾಡಿ ತಾಲೂಕಿನ ಯರನಾಳ ಗ್ರಾಮದ ವಿರಕ್ತಮಠದಲ್ಲಿ ಶ್ರೀ ಮ. ನಿ. ಪ್ರ ದಯಾನಂದ ಮಹಾಸ್ವಾಮಿಗಳವರ ದಿವ್ಯ ಸನ್ನಿಧಿಯಲ್ಲಿ ಏರ್ಪಟ್ಟಾಗ "ಗ್ರಾಮೀಣ ಜನತೆ ಹಾಗೂ ರಾಜಕೀಯ ಚಿಂತನೆ" ಎಂಬ ವಿಷಯ ಕುರಿತು ನಾನು ಉಪನ್ಯಾಸ ನೀಡಿದೆ. ಆ ಉಪನ್ಯಾಸದ ಪ್ರಮುಖ ಸಂಗತಿಗಳೇ ವಿಸ್ತೃತ ಹಾಗೂ ಬರಹ ರೂಪದಲ್ಲಿ ಮಾರ್ಪಾಡುಗೊಂಡು ಇದೀಗ ಗ್ರಂಥ ರೂಪದಲ್ಲಿ ವಿಶ್ವವಿದ್ಯಾಲಯದಿಂದ ಪ್ರಕಟಗೊಳ್ಳುತ್ತಿದೆ.

ಇಂದಿನ ಪ್ರಜಾಪ್ರಭುತ್ವದ ಯುಗದಲ್ಲಿ ಬಹಳಷ್ಟು ದೇಶಗಳು ಪ್ರಜಾಪ್ರಭುತ್ವ ಪದ್ಧತಿಯನ್ನೇ ತಮ್ಮ ಸರಕಾರ ಪದ್ಧತಿಯನ್ನಾಗಿ ಅಂಗೀಕರಿಸಿಕೊಂಡಿರುವಂತೆ ನಾವೂ ಸಹ ಪ್ರಜಾಪ್ರಭುತ್ವ ಪದ್ಧತಿಯ ಸರಕಾರವನ್ನೇ ಅಂಗೀಕರಿಸಿಕೊಂಡಿದ್ದೇವೆ. ನಮ್ಮದು ಹಳ್ಳಿಗಳ ದೇಶ. ನಮ್ಮ ಬಹು ಸಂಖ್ಯಾತರರು ಹಳ್ಳಿಗಳಲ್ಲಿ ವಾಸಿಸಿದ್ದಾರೆ.

ಅವರೇ ನಮ್ಮ ರಾಷ್ಟ್ರದ ಬೆನ್ನೆಲುಬು. ಅವರು ಸುಶಿಕ್ಷಿತರಾದರೆ, ರಾಜಕೀಯ ಪರಿಜ್ಞಾನ ಪಡೆದುಕೊಂಡರೇನೆ ನಮ್ಮ ಪ್ರಜಾಪ್ರಭುತ್ವಕ್ಕೆ ಭದ್ರ ಬುನಾದಿಯೆನ್ನಬಹುದು. ಇದಕ್ಕೆ ಪೂರಕವಾದ ಅಂಶಗಳಾದಂತಹ ನಮ್ಮ ದೇಶದಲ್ಲಿ ಪ್ರಜಾಪ್ರಭುತ್ವದ ಉಗಮ, ಬೆಳವಣಿಗೆ, ಅವನತಿ ಹಾಗೂ ಪುನರುತ್ಥಾನ, ಪ್ರಜಾಪ್ರಭುತ್ವದ ಆವಶ್ಯಕ ಅಂಶಗಳು, ಹಕ್ಕುಗಳು ಹಾಗೂ ಕರ್ತವ್ಯಗಳು ಮುಂತಾದ ವಿಚಾರಗಳನ್ನು ಅರಿಯುವಲ್ಲಿ ಪ್ರಸ್ತುತ ಗ್ರಂಥವು ಗ್ರಾಮೀಣ ಜನತೆಗೆ ಸಹಾಯಕವಾಗುವದೆಂದು ಭಾವಿಸುತ್ತೇನೆ. ಇದರಲ್ಲಿ ಪಾಂಡಿತ್ಯವನ್ನು ಹುಡುಕಬೇಕೆನ್ನುವವರು ನಿರಾಶೆಗೊಳ್ಳಬಹುದು. ಆದರೆ ಇದನ್ನೋದಿದ ಜನಸಾಮಾನ್ಯರು ತಮ್ಮ ಜ್ಞಾನ ವೃದ್ಧಿಸಿತೆಂದು ಹೇಳುತ್ತಾರೆನ್ನುವ ನಂಬುಗೆ ನನಗಿದೆ. ಈ ಬರಹಕ್ಕೆ ಅದರವೇ ಆದ ಇತಿಮಿತಿಗಳಿವೆ. ಅವನ್ನು ನಾನು ಅರಿಯದವನೇನಲ್ಲ. ವಿಷಯವನ್ನು ಜನಸಾಮಾನ್ಯರಿಗೆ ತಿಳಿಯುವ ರೀತಿಯಲ್ಲಿ ಬರೆಯಲು ಪ್ರಯತ್ನಿಸಿದ್ದೇನೆ.

ಇಂತಹ ಕಾಲೋಚಿತ ವಿಷಯ ಕುರಿತು ಉಪನ್ಯಾಸ ನೀಡಲು ಹಾಗೂ ಅದನ್ನು ವಿಸ್ತೃತ ರೂಪದಲ್ಲಿ ಬರೆಯಲು ಪ್ರೋತ್ಸಾಹಿಸಿದ ಪ್ರಸಾರಾಂಗದ ಅಂದಿನ ನಿರ್ದೇಶಕರಾದ ಶ್ರೀ ಎಸ್. ಬಿ. ನಾಯಕ ಅವರನ್ನು, ಇಂತಹ ಗ್ರಂಥವೊಂದನ್ನು ಪ್ರಕಟಿಸಲು ಮುಂದೆ ಬಂದಿರುವ ವಿಶ್ವವಿದ್ಯಾಲಯದ ಪ್ರಸಾರಾಂಗದ ಅಧಿಕಾರಿಗಳನ್ನು, ನನ್ನ ಉಪನ್ಯಾಸವನ್ನು ಆಸಕ್ತಿ

ಯಿಂದ ಕೇಳಿದ ಯರನಾಳ ಗ್ರಾಮದ ಬಾಂಧವರನ್ನು, ಶಿಬಿರದಲ್ಲಿ ನನಗೆ ಅತೀವ ಪ್ರೋತ್ಸಾಹ ನೀಡಿದ ಪ್ರಸಾರಾಂಗದ ಆಗಿನ ಸಹಾಯಕ ನಿರ್ದೇಶಕರಾದ ಶ್ರೀ ಈಶ್ವರ ಕಮ್ಮಾರವರನ್ನು ಹಾಗೂ ಹಸ್ತಪ್ರತಿಯನ್ನು ಆಸ್ಥೆಯಿಂದ ಕೂಲಂಕಷವಾಗಿ ಓದಿ ಭಾಷೆಯ ದೃಷ್ಟಿಯಲ್ಲಿ ಹಾಗೂ ವಿಷಯ ನಿರೂಪಣೆಯಲ್ಲಿ ಸಲಹೆ ಸೂಚನೆಗಳನ್ನು ನೀಡಿದ ಹಿರಿಯ ಸಹ ಉದ್ಯೋಗಿ ಪ್ರೊ. ಕೆ.ಬಿ. ಕುಲಕರ್ಣಿಯವರನ್ನು ಕೃತಜ್ಞತೆಯಿಂದ ನೆನೆಯುತ್ತ ಈ ಪುಟ್ಟ ಪುಸ್ತಕವನ್ನು ಓದುಗರ ಮುಂದಿಡಲು ಇಚ್ಛಿಸುತ್ತೇನೆ.

ಸದಾ ನನ್ನ ಶ್ರೇಯೋಭಿವೃದ್ಧಿಗಾಗಿ ಹಾರೈಸುತ್ತಿರುವ ತಂದೆ ತಾಯಿಗಳಿಗೆ ಈ ಗ್ರಂಥ ಅರ್ಪಿತ.

ಎಲ್. ಎಚ್. ಕಲ್ಮಠ

ಹುನಗುಂದ

ವ್ಹಿ.ಎಂ.ಎಸ್.ಆರ್. ವಸ್ತ್ರದ ಕಲಾ ಹಾಗೂ ವಿಜ್ಞಾನ
ಮಹಾವಿದ್ಯಾಲಯ, ಹುನಗುಂದ

ಪರಿವಿಡಿ

೧. ರಾಜಕೀಯ ಚಿಂತನೆಯ ಆವಶ್ಯಕತೆ

ಚಿಂತನೆ ಎಂಬುದು ಮನುಷ್ಯನನ್ನು ಇತರ ಪ್ರಾಣಿ ವರ್ಗದಿಂದ ಪ್ರತ್ಯೇಕಿಸುವ ಒಂದು ಪ್ರಮುಖ ಲಕ್ಷಣವಾಗಿದೆ. ಆದರೆ ಚಿಂತನೆ ಮಾಡುವವರು ಎಲ್ಲೋ ಕೆಲವರು ಮಾತ್ರ; ಈಗಿನ ನಮ್ಮ ಬಹು ಸಂಖ್ಯಾತ ಜನತೆ ಏನನ್ನೂ ಪ್ರಶ್ನಿಸದೇ, ವಿಚಾರ ಮಾಡದೇ ಅಥವಾ ಅವರಿವರ ಚಿಂತನೆಗಳ ಮೇಲೆ ಬದುಕುತ್ತ ಕಾಲತಳ್ಳು ತ್ತಾರೆ.ಇಂತಹ ಬೌದ್ಧಿಕ ಆಲಸ್ಯ ನಮ್ಮಲ್ಲಿ ಆದಷ್ಟು ತೀವ್ರ ಕೊನೆಗೊಳ್ಳಬೇಕು. ಈ ಕೆಲಸ ಈ ಚಿಕ್ಕ ಗ್ರಂಥದಿಂದ ಸ್ವಲ್ಪ ಮಟ್ಟಿಗಾದರೂ ಸಾಧ್ಯವಾದೀತೆಂಬ ಭರವಸೆ ಇದೆ.

ವಿವೇಕಯುತವಾದ ಪ್ರಾಣಿ ಎಂದು ಕರೆಯಿಸಿಕೊಳ್ಳುವ ಮಾನವ ಅದೇ ರೀತಿಯಾಗಿ ಬದುಕಿದರೇನೆ ಅವನಿಗೂ ಹಾಗೂ ಇನ್ನುಳಿದ ಪ್ರಾಣಿಗಳಿಗೂ ವ್ಯತ್ಯಾಸ ಕಂಡು ಬರುತ್ತದೆ. ನಮ್ಮ ವಿಚಾರ-ಧಾರೆಗಳೇ ನಮ್ಮ ಬದುಕನ್ನು ನಿರ್ಧರಿಸುತ್ತವೆ. ಚಿಂತನೆಯಿಂದ ನಮಗೆ ನಮ್ಮ ಹಕ್ಕು ಹಾಗೂ ಕರ್ತವ್ಯ ಕರ್ಮಗಳ ಅರಿವಾಗುತ್ತದೆ.

ಇಂತಹ ಚಿಂತನೆ ಮಾನವ ಕುಲಕ್ಕೇನೂ ಹೊಸದಾದುದೇನಲ್ಲ. ರಾಜಕೀಯ ಚಿಂತನೆಯ ವಿಷಯ ಇತಿಹಾಸದಷ್ಟೇ ಪುರಾತನ ವಾದುದು. ಈ ಬಗೆಗಿನ ಚಿಂತನೆಯ ಪಿತಾಮಹರು ಪ್ರಾಚೀನ ಗ್ರೀಕರು ಎನ್ನಬಹುದು. ಅದಕ್ಕೂ ಮೊದಲು ಇತರರು ರಾಜಕೀಯ ವಿಷಯಗಳ ಬಗ್ಗೆ ಚಿಂತನೆ ಮಾಡಿದ್ದರೂ ಅದನ್ನು ವೈಜ್ಞಾನಿಕ ರೀತಿಯಲ್ಲಿ ಮಾಡಿದ್ದಿರಲಿಲ್ಲ; ಆ ರೀತಿಯಲ್ಲಿ ಮಾಡಿದವರಲ್ಲಿ ಗ್ರೀಕರು ಅಗ್ರಸ್ಥಾನದಲ್ಲಿದ್ದಾರೆ. ಅರಿಸ್ಟಾಟಲ್‌ರು (ಕ್ರಿ. ಶ. ಪೂ. ೩೮೪-೩೨೨) ಇಂತಹ ಚಿಂತಕರ ಪಿತಾಮಹರೆನ್ನಬಹುದು.

ಈ ವಿಷಯದಲ್ಲಿ ನಮ್ಮ ಪೂರ್ವಜರೂ ಹಿಂದೆ ಬಿದ್ದಿರಲಿಲ್ಲ. ನಮ್ಮ ದೇಶದ ಚಿಂತಕರೂ ಸಹ ಗ್ರೀಕರ ಪೂರ್ವದಲ್ಲಿಯೇ ರಾಜಕೀಯ ಚಿಂತನೆ ಮಾಡಿದ್ದರು. ಆದರೆ ಅಂತಹ ಚಿಂತನೆ ವ್ಯವಸ್ಥಿತವಾಗಿ ಬೆಳೆದು ಬರಲಿಲ್ಲ. ಈ ಸಂದರ್ಭದಲ್ಲಿ ಡಿ. ವ್ಹಿ. ಜಿ. ಯವರ ಹೇಳಿಕೆಯನ್ನು ಸ್ಮರಿಸಬಹುದಾಗಿದೆ; "ಯಥಾರ್ಥವನ್ನು ಗೌರವಿಸುವದಾದರೆ ರಾಜಕೀಯ ಚಿಂತನೆ ಯುರೋಪಿನಲ್ಲಿ ಬೆಳೆದು ಶಾಖೋಪಶಾಖೆಗಳಾಗಿ ವಿಕಾಸಗೊಂಡಿರುವಂತೆ ನಮ್ಮ ಹಿಂದೂ ದೇಶದಲ್ಲಿ ಅಂತಹ ಚಿಂತನೆ ಪರಂಪರಾಗತವಾಗಿ ಬೆಳೆದು ಬಂದಿಲ್ಲ ವೆಂದೆ ಹೇಳಬೇಕಾಗುತ್ತದೆ."

ಇದು ಪ್ರಜಾಪ್ರಭುತ್ವ ಯುಗ ಇದರ ಯಶಸ್ಸು ಕೇವಲ ಚುನಾಯಿಸಿ ಕಳುಹಿಸಿದ ಶಾಸಕರನ್ನೂ ಅವಲಂಬಿಸಿರದೆ ದೇಶದ ಪ್ರತಿಯೊಬ್ಬ ಪ್ರಜೆಯನ್ನೂ ಅವಲಂಬಿಸಿದೆ. ಕಾರಣ ಎಲ್ಲ ಪ್ರಜೆಗಳೂ ಪ್ರಜಾಪ್ರಭುತ್ವದ ಮಹತ್ವ, ಕಾರ್ಯಪದ್ಧತಿ ಅದರ ಯಶಸ್ಸಿಗೆ ಬೇಕಾಗುವ ಮೂಲತತ್ವಗಳು, ಅದಕ್ಕಾಗಿ ತಮಗಿರುವ ಹಕ್ಕು ಹಾಗೂ ಕರ್ತವ್ಯಗಳನ್ನು ಅರಿತುಕೊಂಡು, ಆಚರಿಸ ಬೇಕಾಗುತ್ತದೆ. ಪ್ರಜಾಪ್ರಭುತ್ವ ಪದ್ಧತಿಯು ಸರಕಾರವನ್ನು ರೂಢಿಸಿಕೊಂಡಿದ್ದರಿಂದ ನಮ್ಮ ಜೀವನಕ್ಕೆ ರಾಜಕೀಯ ಮುಖವೂ ಮೂಡಿದೆ. ರಾಜಕೀಯದಿಂದ ದೂರವಿರುವದು ಈಗ ಕಲ್ಪನಾತೀತ ವೆನಿಸಬಹುದು. ಅದು ಅಸಾಧ್ಯವೂ ಎನ್ನಬಹುದು. ಎಲ್ಲ ಜನರೂ ರಾಜಕೀಯದಲ್ಲಿ ಪ್ರತ್ಯಕ್ಷವಾಗಿ, ಇಲ್ಲವೇ ಪರೋಕ್ಷವಾಗಿ ಭಾಗವಹಿಸುವ ಅನಿವಾರ್ಯಸ್ಥಿತಿ ಮೂಡಿ ಬಂದಿದೆ.

ಸಾವಿರಾರು ವರುಷಗಳಿಂದ ದಾಸ್ಯತ್ವದಲ್ಲಿ ಬೆಳೆದು ಬಂದ ನಮ್ಮ ಜನ ರಾಜಕಾರಣದ ಬಗ್ಗೆ ನಿರಾಸಕ್ತಿ ತೋರಿಸುವದು ಸಹಜವೆನಿ

ಸುತ್ತದೆ ಆದರೆ ದೇಶಕ್ಕೆ ಸ್ವಾತಂತ್ರ್ಯ ಬಂದ ಮೇಲೂ ನಮ್ಮ ಜನರ ನಿರಾಸಕ್ತಿಯ ಮನೋವೃತ್ತಿ ಬದಲಾಗಲಿಲ್ಲ. ಇದಕ್ಕೆ ಮುಖ್ಯ ಕಾರಣವೆಂದರೆ ರಾಜಕೀಯ ಎಂದ ಕೂಡಲೇ ಅಸತ್ಯ, ಅನ್ಯಾಯ, ವಂಚನೆ, ಮೋಸ, ಇವುಗಳ ವಿಕೃತ ಕಲಸುಮೇಲೋಗರ ಎಂಬ ಚಿತ್ರ ನಮ್ಮ ಜನರ ಕಣ್ಣು ಮುಂದೆ ನಿಲ್ಲುತ್ತದೆ. ಕಾರಣ ರಾಜಕಾರಣದ ಕಡೆಗೆ ಆಸಕ್ತಿ ಇರುವ ಸಾತ್ವಿಕ ಪ್ರಜೆಯೂ ಸಹ ರಾಜಕಾರಣಕ್ಕೆ ದೂರದಿಂದಲೇ ನಮಸ್ಕಾರ ಹೇಳುವ ಕಾಲಬಂದಿದೆ. ೧೮ ನೇ ಶತಮಾನದ ಇಂಗ್ಲೆಂಡಿನ ಸಾಹಿತಿ ಡಾ : ಜಾನ್‌ಸನ್ "ರಾಜಕೀಯ ಎಂದರೆ ಪಟಿಂಗನ ಕೊನೆಯ ಆಸರೆ" (Politics is the last resort of the scoundrel) ಎಂದು ಹೇಳಿದ್ದು ನಮ್ಮಲ್ಲಿ ಬಹುಜನರಿಗೆ ನಿಜವೆನಿಸತೊಡಗಿದೆ. ಈ ವಿಕೃತ ಚಿತ್ರವನ್ನು ಅಳಿಸಬೇಕೆಂದರೆ, ನಮ್ಮ ವಿಚಾರವಂತರು, ಸಾಹಿತಿಗಳು, ತತ್ವ ಜ್ಞಾನಿಗಳು, ಧರ್ಮ ಗುರುಗಳು ರಾಜಕೀಯದಲ್ಲಿ ಸೇರಬೇಕು. ರಾಜಕೀಯ ಹೊಲಸಾಗದಂತೆ ಪರಿಶುದ್ಧರು ನೋಡಿಕೊಳ್ಳಬೇಕು. ಜಗಜ್ಯೋತಿ, ವಿಶ್ವಗುರು, ಮಹಾತ್ಮಾ ಬಸವಣ್ಣನವರು ರಾಷ್ಟ್ರಪಿತ ಗಾಂಧೀಜಿಯವರು ರಾಜಕೀಯದಲ್ಲಿ ಇದ್ದರು ಎಂಬುದನ್ನು ನಾವು ಸದಾ ನೆನಪಿನಲ್ಲಿಟ್ಟುಕೊಳ್ಳಬೇಕು. ಅಧಿಕಾರ ಸೂತ್ರಗಳನ್ನು ಹಿಡಿದುಕೊಂಡವರು, ತಮ್ಮ ಅಧಿಕಾರ ಶಕ್ತಿಯಿಂದ ಸಮಾಜದ ಸ್ವರೂಪವನ್ನೇ ಬದಲಿಸಬಹುದು. ಇಂತಹ ಮಹತ್ವದ ವಿಷಯದಲ್ಲಿ ಶ್ರೀ ಸಾಮಾನ್ಯರಾದ ನಾವೆಲ್ಲ ಅನಾಸಕ್ತಿ ತೋರಿದರೆ ಸಮಾಜ ಅಧೋಗತಿಗಿಳಿಯುತ್ತದೆ. ಅದಕ್ಕೆಲ್ಲ ನಾವೇ ಹೊಣೆಗಾರರಾಗುತ್ತೇವೆ.

ಇಂದಿನ ನಮ್ಮ ಹಲವಾರು ಸಮಸ್ಯೆಗಳಿಗೆ ನಮ್ಮ ಜನರ ರಾಜಕೀಯ ನಿರಾಸಕ್ತಿ ಹಾಗೂ ಪ್ರಜಾಪ್ರಭುತ್ವದ ಮೂಲ ತತ್ವಗಳ ಅಜ್ಞಾನವೇ ಕಾರಣವಾಗಿದೆ. ಆದುದರಿಂದ ಎಲ್ಲ ಪ್ರಜೆಗಳೂ ಈ ಬಗ್ಗೆ ಸಕ್ರೀಯ ಚಿಂತನೆ ಮಾಡಿದರೆ ದೇಶದ ಹಲವಾರು ಸಮಸ್ಯೆಗಳು ಪರಿಹಾರಗೊಂಡು ಪ್ರಜಾಪ್ರಭುತ್ವ ಯಶಸ್ವಿಯಾಗಿ ಕಾರ್ಯ ಮಾಡುವದಲ್ಲದೇ ದೇಶದ ಅಭಿವೃದ್ಧಿಯೂ ಆಗುತ್ತದೆ.

ಈಗ ನಮ್ಮ ದೇಶದಲ್ಲಿರುವದು ವಿಕೇಂದ್ರೀಕೃತ ಪ್ರಜಾಪ್ರಭುತ್ವ. ನಮ್ಮ ಗ್ರಾಮೀಣ ಜನತೆ "ಪಂಚಾಯತಿರಾಜ್ಯ" ವ್ಯವಸ್ಥೆಗೆ ಒಳಪಟ್ಟಿದೆ. ಗ್ರಾಮೀಣ ಜನತೆಯಲ್ಲಿ ಪ್ರಜಾಪ್ರಭುತ್ವದ ಬಗ್ಗೆ ತಿಳುವಳಿಕೆ ಬೆಳೆದುಬಂದಂತೆ ಅಭಿವೃದ್ಧಿ ಕಾರ್ಯಗಳು ತೀವ್ರಗತಿಯಿಂದ ಪ್ರಗತಿ ಪಥದಲ್ಲಿ ಸಾಗುವದರಲ್ಲಿ ಸಂದೇಹವಿಲ್ಲ ಭಾರತವು ಹಳ್ಳಿಗಳ ದೇಶ. ನೂರಕ್ಕೆ ೮೦ ರಷ್ಟು ಜನಹಳ್ಳಿಗಳಲ್ಲಿದ್ದಾರೆ. ಇವರೆಲ್ಲ ರಾಜಕೀಯ ಪರಿಜ್ಞಾನ ಹೊಂದುವವರೆಗೆ ನಮ್ಮ ಪ್ರಜಾಪ್ರಭುತ್ವಕ್ಕೆ ಭದ್ರ ಬುನಾದಿಯೇ ಇಲ್ಲವೆನ್ನಬಹುದು.

ಈ ಎಚ್ಚರವನ್ನು ರಕ್ತಗತಮಾಡಿಕೊಳ್ಳದೆ ನಮ್ಮ ಜನತೆ ಕುರಿಗಳಂತೆ ನಡೆದುಕೊಂಡರೆ ನಾಳೆ ಕುರಿಗಳ ರಾಜ್ಯಕ್ಕೆ ತೋಳನೇ ಅಧಿಪತಿಯಾಗುತ್ತಾನೆ ವಿಚಾರ ಮಾಡಿ ನಮ್ಮ ಹಕ್ಕು ಹಾಗೂ ಕರ್ತವ್ಯಗಳನ್ನು ಪಾಲಿಸದಿದ್ದರೆ ಆಶಿಕ್ಷಿತರಿಂದ ಆಳಿಸಿಕೊಳ್ಳುವ ದುರಂತಕ್ಕೆ ಈಡಾಗಬೇಕಾಗುತ್ತದೆ.

೨. ಭಾರತದಲ್ಲಿ ಪ್ರಜಾಪ್ರಭುತ್ವ

"ನಮ್ಮ ನಾಗರಿಕತೆ, ಸಂಸ್ಕೃತಿಯ ಪತನಕ್ಕೆ ಮುಖ್ಯ ಕಾರಣ ನಮ್ಮ ಆಡಳಿತವಲ್ಲಿಯ ವೈಫಲ್ಯ "(If our civilisation fails it will be mainly because of a breakdown of administration) ಎಂದು ಹೇಳಿದ ಡಬ್ಲ್ಯು.ಬಿ. ಡಾನ್‌ಹ್ಯಾಮ ಎಂಬುವರ ವಿಚಾರದಲ್ಲಿ ನನಗೆ ಅಪಾರ ವಿಶ್ವಾಸ. ನಮ್ಮ ಉಜ್ವಲ ಸಂಸ್ಕೃತಿ ಸಾವಿರಾರು ವರ್ಷಗಳ ಹಿಂದೆ ಬೆಳೆದು ಬರಬೇಕಾದರೆ ಆಗ ನಮ್ಮ ದೇಶದಲ್ಲಿ ಆಚರಣೆಯಲ್ಲಿದ್ದ ಆಡಳಿತ ಪದ್ಧತಿಯೇ ಮುಖ್ಯ ಕಾರಣ ಎನ್ನಬಹುದು.

ಸ್ವಾತಂತ್ರ್ಯಾ ನಂತರ ನಮ್ಮ ದೇಶದಲ್ಲಿಯೂ ಪ್ರಜಾಪ್ರಭುತ್ವ ಸರಕಾರ ಸ್ಥಾಪಿತವಾಯಿತು. ಈ ಪ್ರಜಾಪ್ರಭುತ್ವ ಎಂಬ ಪದ "ಡೆಮಾಕ್ರಸಿ" ಎಂಬ ಇಂಗ್ಲೀಷ್ ಪದದ ರೂಪಾಂತರವಾಗಿದೆ. ಈ ಪದ ಗ್ರೀಕ ಭಾಷೆಯ (Demos)ಡೆಮಾಸ್ ಹಾಗೂ(K ratia) ಕ್ರೆಷಿಯಾ ಎಂಬೆರಡು ಪದಗಳ ಸಂಧಿಯಿಂದ ಉಂಟಾದ ಹೊಸ ಪದ ಡೆಮಾಕ್ರಸಿ ಎಂದರೆ ಪ್ರಜೆಗಳ ಶಕ್ತಿ ಅಥವಾ ಸರಕಾರ ಎಂದು ಅರ್ಥಮಾಡಿಕೊಳ್ಳಬಹುದು.

ಪ್ರಜಾಪ್ರಭುತ್ವದಲ್ಲಿ ಸಾಮಾನ್ಯವಾಗಿ ಎರಡು ಪ್ರಕಾರಗಳನ್ನು ಮಾಡಲಾಗುತ್ತದೆ.

೧) ಪ್ರತ್ಯಕ್ಷ ಹಾಗೂ ಪರೋಕ್ಷ ಪ್ರಜಾಪ್ರಭುತ್ವ ೨) ಕೇಂದ್ರೀಕೃತ ಹಾಗೂ ವಿಕೇಂದ್ರೀಕೃತ ಪ್ರಜಾಪ್ರಭುತ್ವ. ನಮ್ಮಲ್ಲಿರುವದು ಪರೋಕ್ಷ ಹಾಗೂ ವಿಕೇಂದ್ರೀಕೃತ ಪ್ರಜಾಪ್ರಭುತ್ವ.

ಗಾತ್ರವಮಾನದಿಂದ, ನಮ್ಮ ದೇಶ ಪ್ರಪಂಚದಲ್ಲಿಯೇ ಏಳನೆಯದು ಜನಸಂಖ್ಯಾ ಮಾನದಿಂದ ಎರಡನೆಯದು. ಇಂತಹ ವಿಶಾಲ ದೇಶದ ಆಡಳಿತವನ್ನು ಒಂದೇ ಒಂದು ಕೇಂದ್ರದಿಂದ ನಡೆಸುವದು ಸಾಧ್ಯವಿಲ್ಲ. ನಮ್ಮ ರಾಷ್ಟ್ರ "ಪೋಲಿಸ್ ರಾಜ್ಯ"ವಾಗಿರದೇ "ಕಲ್ಯಾಣ ರಾಜ್ಯ"ವಾಗಿರುವದರಿಂದ, ಅದು ಜನತೆಯ ಕಲ್ಯಾಣಕ್ಕಾಗಿ ಅಸಂಖ್ಯಾತ ಕಾರ್ಯಗಳನ್ನು ನಿರ್ವಹಿಸಬೇಕಾಗಿದೆ. ಈ ಕಾರ್ಯಗಳನ್ನೆಲ್ಲ ಕೇವಲ ಕೇಂದ್ರ ಸರಕಾರ ನಿರ್ವಹಿಸುವದು ಸಾಧ್ಯವಿಲ್ಲ. ಸ್ಥಳೀಯ ಪರಿಸ್ಥಿತಿ ಹಾಗೂ ಸಮಸ್ಯೆಗಳೊಂದಿಗೆ ಅವಶ್ಯಕವಾದ ಪರಿಜ್ಞಾನವನ್ನು ಹೊಂದಿರದ ಕೇಂದ್ರ ಸರಕಾರ ಸ್ಥಳೀಯ ಸಮಸ್ಯೆಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳಲಾರದು. ಆದ್ದರಿಂದಲೇ "ಪಂಚಾಯತ ರಾಜ್ಯ" (ವಿಕೇಂದ್ರೀಕೃತ ಪ್ರಜಾಪ್ರಭುತ್ವ) ಪದ್ಧತಿಯನ್ನು ಅಳವಡಿಸಿಕೊಳ್ಳಲಾಗಿದೆ. ಪ್ರಜಾಪ್ರಭುತ್ವವನ್ನು ಪ್ರಜೆಗಳಿಂದ ನಡೆಯುವ ಸರಕಾರವೆಂದು ಕರೆಯಲಾಗುತ್ತದೆ. ಆಡಳಿತ ಕಲಿಯ ಪ್ರಥಮ ಪಾಠವನ್ನು ಪ್ರಜೆಗಳು ಸ್ಥಳೀಯ ರಾಜಕೀಯ ರಂಗದಲ್ಲಿ ಸುಲಭವಾಗಿ ಕಲಿತುಕೊಳ್ಳಬಹುದು. ರೂಸೋರವರು "ಪ್ರಜಾಪ್ರಭುತ್ವ ಸಫಲವಾಗಬೇಕಾದರೆ ಅದು ಉತ್ತಮವಾದ ಸ್ಥಳೀಯ ಸರಕಾರ ವ್ಯವಸ್ಥೆಯನ್ನು ಹೊಂದಿರಬೇಕು." ಎಂದು ಹೇಳಿದ ಮಾತಿಗೆ ಒರೆಗಲ್ಲಾಗುತ್ತದೆ.

ನಮ್ಮ "ಪಂಚಾಯಿತಿ ರಾಜ್ಯ" ವ್ಯವಸ್ಥೆಗೆ ಸಾವಿರಾರು ವರುಷಗಳ ಇತಿಹಾಸವಿದೆ. "ವೇದ ಕಾಲ"ದ ಸಭಾ ಹಾಗೂ ಸಮಿತಿಗಳು ಆಗಿನ ಗ್ರಾಮಗಳ ಆಡಳಿತವನ್ನು ನೋಡುತ್ತಿದ್ದಂತೆ ಮೌರ್ಯರ ಕಾಲದಲ್ಲಿ ಆ ಕಾರ್ಯವನ್ನು 'ಗಣ'ಗಳು ಮಾಡುತ್ತಿದ್ದವು. ಮುಂದೆ ಮಹಾಭಾರತದ ಕಾಲಕ್ಕೆ ಇವು "ಗ್ರಾಮ ಸಂಘ"ಗಳೆಂದು

ಕರೆಯಲ್ಪಟ್ಟವು. ಒಟ್ಟಿನಲ್ಲಿ ಹಳ್ಳಿಗಳ ಆಡಳಿತವನ್ನು ಈ ರೀತಿಯ ಸಂಸ್ಥೆಗಳು ಸುವ್ಯವಸ್ಥಿತ ರೀತಿಯಿಂದ ನಡೆಸುತ್ತಿದ್ದವು. ಇವುಗಳಿಂದಲೇ ನಮ್ಮ ಪುರಾತನ ಸಂಸ್ಕೃತಿ ಬೆಳೆದು ಬಂದಿತ್ತು. ಅವು ಗ್ರಾಮಗಳಲ್ಲಿಯ ಶಿಸ್ತು ಹಾಗೂ ಶಾಂತತೆಯನ್ನು ಕಾಯ್ದು ಕೊಂಡು ಸಾರ್ವಜನಿಕ ಅಭಿವೃದ್ಧಿಗೆ ಹೆಣಗುತ್ತಿದ್ದವು. ಎಲ್ಲ ದೃಷ್ಟಿಯಿಂದಲೂ ಅಂದಿನ ಗ್ರಾಮಗಳು ಸ್ವಾವಲಂಬಿಯಾಗಿದ್ದವು.

ಮಧ್ಯಕಾಲೀನ ಯುಗದಲ್ಲಿ ಪರಕೀಯರ ದಾಳಿಯಿಂದ ಹಳ್ಳಿಗಳ ಆಡಳಿತಕ್ಕೆ ಪೆಟ್ಟು ತಗುಲಿತು. ಮೊಘಲರ ಕಾಲದಲ್ಲಿ ಗ್ರಾಮಾಡಳಿತ ಬಹಳಷ್ಟು ಅಲಕ್ಷಿಸಲ್ಪಟ್ಟಿತು. ಅಲ್ಲದೇ ಬ್ರಿಟಿಷರು ಬರುವದರೊಳಗಾಗಿ ಗ್ರಾಮ ಸಂಘಗಳಲ್ಲಿ ವಿಷಮತೆ ತಲೆದೋರಿತ್ತು. ಬ್ರಿಟಿಷರು ಬಂದ ಮೇಲೆ ಈ ವಿಷಮತೆಯು ಜ್ವಾಲೆಗೆ ಮತ್ತಷ್ಟು ಎಣ್ಣೆ ಸುರಿದಂತಾಗಿ ಅವು ಕ್ರಿಯಾತ್ಮಕವಾಗದ ವಾತಾವರಣ ನಿರ್ಮಾಣಗೊಂಡಿತು.

ಆಧುನಿಕ ಕಾಲದ ಪ್ರಾರಂಭದಲ್ಲಿ ಅಂದರೆ ೧೮೮೨ ರಲ್ಲಿ ಲಾರ್ಡ ರಿಪ್ಪನ್‌ರು ಈ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳನ್ನು ಸುಧಾರಿಸಲು ಪ್ರಯತ್ನಿಸಿದರು. ಆದರೆ ಈ ಕಾರ್ಯಕ್ಕೆ ಜನರ ಬೆಂಬಲ ಸಿಗಲಿಲ್ಲ. ನಂತರ ೧೯೦೭ ರಲ್ಲಿ "Royal Commission on De-Centralisation" ಈ ಸಂಸ್ಥೆಗಳಿಗೆ ಪುನಃ ಚೇತನ ಕೊಡಲು ಶಿಫಾರಸು ಮಾಡಿತು. ಇದರನ್ವಯ ೧೯೧೨ ರಲ್ಲಿ ಆಗಿನ ಸರಕಾರ "ಪಂಚಾಯತ ಯೋಜನೆಯನ್ನು ಪುಷ್ಟೀಕರಿಸುವ ಯೋಜನೆ" (Pilot Project to revitalise Panchayats)

ಯನ್ನು ಕೈಕೊಂಡಿತು ಈ ಯೋಜನೆಯೂ ಸಹ ನಮ್ಮ ಜ
ಅನಾಸಕ್ತಿ ಹಾಗೂ ಅಸಹಕಾರಗಳಿಂದಾಗಿ ವಿಫಲಗೊಂಡಿ

೧೯೨೦ ರಲ್ಲಿ ಮಹಾತ್ಮಾ ಗಾಂಧೀಜಿಯವರು ತಮ್ಮ ಸ್ವಾತಂ
ಆಂದೋಲನ ವಿಧಾಯಕ ಕಾರ್ಯಕ್ರಮದಲ್ಲಿಯೇ ತ
"Constructive Programme" ಬೇಡಿಕೆಯನ್ನು ಮುಂದಿ
ದ್ದರು: ಅಂದರೆ ನಮ್ಮ ಹಳ್ಳಿಗಳ ಜನರೇ ನೈತಿಕವಾಗಿ ಹಾ
ಭೌದ್ಧಿಕವಾಗಿ ಅಭಿವೃದ್ಧಿ ಹೊಂದಬೇಕು; ಸರ್ವ ವಿಧದಿಂದಲ
ಸ್ವಾವಲಂಬಿಯಾಗಬೇಕು. ತಮ್ಮ ಆಡಳಿತವನ್ನು ಸ್ವ
ನೋಡಿಕೊಳ್ಳುವಂತಾಗಬೇಕು.

ಸುಮಾರು ಇದೇ ಅವಧಿಯಲ್ಲಿ ಕವೀಂದ್ರ ರವೀಂದ್ರನಾ
ಠಾಕೂರರವರು ಸಹ ಗಾಂಧೀಜಿಯವರ ಬೇಡಿಕೆಯ ರೀತಿ
ಕಾರ್ಯವನ್ನು ಶ್ರೀನಿಕೇತನ ಭಾಗದ ೭೦-೮೦ ಹಳ್ಳಿಗಳ
ಪ್ರಾರಂಭಿಸಿದ್ದರು.

ಇದೇ ರೀತಿಯ ಕಾರ್ಯವನ್ನು ಪಂಜಾಬದ ಗುರುಗಾ
ಜಿಲ್ಲಾಧಿಕಾರಿ 'ಬ್ರೆಯಿನ್ ಎಂಬವರೂ ಸಹ ಕೈಕೊಂಡಿದ್ದರು.

೧೯೩೭ ರ ಪ್ರಕಾರ ಹಲವಾರು ರಾಜ್ಯಗಳಲ್ಲಿ ಚುನಾವಣೆಗ
ಜರುಗಿದ ಬಳಿಕ ಭಾರತ ಸರಕಾರ ಹಲವಾರು ಗ್ರಾಮೀ
ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಾಕಿಕೊಂಡಿತು. ಆ ಕಾರ
ಕ್ರಮಗಳ ಅನುಷ್ಠಾನಕ್ಕಾಗಿ ರಾಜ್ಯಗಳಿಗೆ ಹಣವನ್ನೊದಗಿಸಿತು.
ರಾಜ್ಯಗಳು ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಕಾ
ಪ್ರವೃತ್ತವಾದವು. ಈ ಕಾರ್ಯಕ್ರಮಗಳ ಉದ್ದೇಶವು ಮ

ಕಡಿಮೆ ಗಾಂಧೀಜಿಯವರ Constructive Programme ವಿಧಾಯಕ ಕಾರ್ಯಕ್ರಮದ ಅಂಶಗಳನ್ನು ಒಳಗೊಂಡಿತ್ತು.

ದೇಶ ಸ್ವಾತಂತ್ರ್ಯವನ್ನು ಪಡೆದುಕೊಂಡ ಮೇಲೆ ನಮ್ಮದೇ ಸಂವಿಧಾನ ೧೯೫೦ ಜನೇವರಿ ೨೬ರಂದು ಆಚರಣೆಗೆ ಬಂದಿತು. ಸಂವಿಧಾನದ ನಾಲ್ಕನೆಯ ಭಾಗದಲ್ಲಿ ಬರುವ ರಾಷ್ಟ್ರನೀತಿಯ ನಿರ್ದೇಶಕ ತತ್ವಗಳಲ್ಲಿಯ (Directive Principles of state Policy) ೪೦ನೇ ವಿಧಿಯು ಪ್ರಕಾರ ನಿರ್ದೇಶಿಸಿದ್ದೇನೆಂದರೆ ರಾಜ್ಯ ಸರಕಾರಗಳು ಗ್ರಾಮೀಣ ಪ್ರದೇಶಗಳಲ್ಲಿ ಪಂಚಾಯಿತಿಗಳನ್ನು ಸ್ಥಾಪಿಸಲು ಮುಂದಾಗಲಿ, ಸ್ಥಾಪಿಸಿ ಅವುಗಳಿಗೆ ಅವಶ್ಯಕವಾದ ಅಧಿಕಾರಗಳನ್ನು ನೀಡಲಿ ಅಂದರೆ ಮಾತ್ರ ಅವು ತಮ್ಮ ಕಾರ್ಯಗಳನ್ನು ಸಮರ್ಥವಾಗಿ ನಿರ್ವಹಿಸಲು ಅನುಕೂಲವಾಗುತ್ತದೆ. (The State shall take steps to organise village panchayats and endow them with such powers and authority as may be necessary to enable them to function as units of self-Government)

ಈ ನಿರ್ದೇಶನದ ಪ್ರಕಾರವೇ ರಾಜ್ಯಗಳು ಗ್ರಾಮೀಣ ಪ್ರದೇಶಗಳಲ್ಲಿ ಪಂಚಾಯಿತಿ ರಾಜ್ಯ ವ್ಯವಸ್ಥೆಯನ್ನು ಜಾರಿಗೆ ತಂದಿವೆ. ಈ ವ್ಯವಸ್ಥೆ ಪ್ರಜಾಪ್ರಭುತ್ವಕ್ಕೆ ಭದ್ರ ಬುನಾದಿ ಎನ್ನಬಹುದು. ಇನ್ನೂ ಕೆಲವರ ಅಭಿಪ್ರಾಯದಲ್ಲಿ ಇವುಗಳು "ಪ್ರಜಾಪ್ರಭುತ್ವದ ಗರಡೀ ಮನೆಗಳಿದ್ದ ಹಾಗೆ, ಪ್ರಜಾಪ್ರಭುತ್ವದ ಬೇರುಗಳಿದ್ದ ಹಾಗೆ". ಇವುಗಳಲ್ಲಿ ಪ್ರಜೆಗಳು ಸಕ್ರೀಯವಾಗಿ ಭಾಗವಹಿಸಿ ಪ್ರಜಾಪ್ರಭುತ್ವವನ್ನು ಬಲಗೊಳಿಸುವದಲ್ಲದೇ ರಾಷ್ಟ್ರದ ಯೋಜನಾ ಬದ್ಧ ಅಭಿವೃದ್ಧಿಗೂ

ನೆರವಾಗಬಹುದು. ಇಲ್ಲಿ ಲಾರ್ಡ್ ಬ್ರೈಸ್‌ರವರು ಹೇಳಿದ ಒಂದು ಮಾತನ್ನು ಸ್ಮರಿಸಿಕೊಳ್ಳುವದು ಸೂಕ್ತವೆನಿಸುತ್ತದೆ. (The best school for democracy and the best guarantee for its success is the practice of local self Government) ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳನ್ನು ಸ್ಥಾಪಿಸುವದೆಂದರೆ ಪ್ರಜಾಪ್ರಭುತ್ವದ ತರಬೇತಿಗೆ ಶಾಲೆಗಳನ್ನು ಸ್ಥಾಪಿಸಿದ ಹಾಗೆ, ಹಾಗೂ ಅವೇ ಪ್ರಜಾಪ್ರಭುತ್ವದ ಯಶಸ್ವಿಗೆ ಭರವಸೆಯನ್ನು ಮೂಡಿಸುವ ಸಂಸ್ಥೆಗಳು.

ಇವೆಲ್ಲ ಪ್ರಯತ್ನ ಮಾಡಿ ಪಂಚಾಯಿತಿ ರಾಜ್ಯ ವ್ಯವಸ್ಥೆಯನ್ನು ಆಚರಣೆಗೆ ತಂದ ಉದ್ದೇಶಗಳೆಂದರೆ :

ಇದು ವ್ಯಕ್ತಿ ಹಾಗೂ ಸಮಾಜಗಳ ಸಂಬಂಧವನ್ನು ಭದ್ರಗೊಳಿಸುತ್ತದೆ. ಸಾಮಾಜಿಕ ಕ್ಷೇತ್ರದಲ್ಲಿ ಪ್ರತಿಯೊಬ್ಬನು ಭಾಗವಹಿಸುವಂತೆ ಪ್ರೇರೆಪಿಸುತ್ತದೆ. ಮತ್ತು ಅವನಿಗೆ ರಾಜಕೀಯದಲ್ಲಿ ಆಸಕ್ತಿಯನ್ನು ಹುಟ್ಟಿಸಿ ಪರಿಪೂರ್ಣ ನಾಗರೀಕನಾಗುವಂತೆ ಪ್ರಯತ್ನಿಸುತ್ತದೆ. ಜನರಿಗೆ ಸ್ವಯಂ ಆಡಳಿತದ ಅಧಿಕಾರವನ್ನು ಕೊಡುತ್ತದೆ. ಇದರಿಂದ ಜನರೂ ಸಹ ಆಡಳಿತದ ಹೊಣೆಯನ್ನು ಹೊತ್ತುಕೊಳ್ಳಲು ಆಸ್ಪದ ಮಾಡಿಕೊಟ್ಟಂತಾಗುತ್ತದೆ. ರಾಜ್ಯ ಮತ್ತು ಕೇಂದ್ರ ಸರಕಾರಗಳಿಗೆ ಆಡಳಿತ ಕ್ಷೇತ್ರದಲ್ಲಿ ಪ್ರೋತ್ಸಾಹ ಸಿಗುತ್ತದೆ. ಆಡಳಿತದ ಭಾರವನ್ನು ನಿರ್ವಹಿಸುವದಕ್ಕೆ "ಪಂಚಾಯಿತಿ ರಾಜ್ಯ" ಪದ್ಧತಿಯು ಆಡಳಿತದ ಸೂತ್ರಗಳನ್ನು ದೃಢಪಡಿಸುತ್ತದೆ.

೮. ಪಂಡಿತ ಜವಾಹರಲಾಲ ನೆಹರೂರವರು ೧ನೇ ಆಗಷ್ಟ ೧೯೬೩ರಲ್ಲಿ ಸಮಾಜ ಕಲ್ಯಾಣ ಮಂತ್ರಿಗಳ ಅಧಿವೇಶನದಲ್ಲಿ ಮಾತನಾಡುತ್ತ ಹೇಳಿದ್ದನ್ನು ಇಲ್ಲಿ ಉದ್ಧರಿಸಬಹುದಾಗಿದೆ.

"Panchayati Raj is a concept of encouraging the people to develop and gain self-reliance means spreading out, the functions of the Govt in these areas to the vast numbers of new authorities.

ಇದೇ ವಿಚಾರವನ್ನು ಪಂಚಾಯಿತಿ ರಾಜ್ಯ ಪದ್ಧತಿಯ ಮುಖ್ಯ ಪ್ರತಿಪಾದಕರಾದ ಶ್ರೀ.ಎಸ್.ಕೆ.ಡೇ. ಅವರು ೧೯೬೩ ಆಗಷ್ಟದಲ್ಲಿ ಹೈದರಾಬಾದದ ಅಧ್ಯಯನ ಶಿಬಿರವೊಂದರಲ್ಲಿ ಮಾತನಾಡುತ್ತ, ಹೀಗೆ ಧೃಢೀಕರಿಸಿದ್ದಾರೆ. The objective of Panchayati and Raj is to establish a participating democracy the panchayat should function as an executive body of the village community to give concrete shape to the wishes and aspirations of the people comprising the Grama Sabha. panchayati Raj he said ought to create a Govt of the people by the people, for the people, and with the people."

ಒಟ್ಟಿನಲ್ಲಿ ಗ್ರಾಮ ಪಂಚಾಯಿತಿಗಳು ಗ್ರಾಮ ರಾಜ್ಯಗಳಾಗಿ ಸಣ್ಣ ಗಣರಾಜ್ಯಗಳಾಗಿ ರಾಮರಾಜ್ಯದ ಕನಸನ್ನು ಮೂಡುವ ಹೊಣೆಯನ್ನು ಹೊತ್ತುಕೊಳ್ಳುವ ಮಹದಾಸೆಯಿಂದ ಜನ್ಮ ತಳೆದಿವೆ.

೩. ಕರ್ನಾಟಕದ ಪಂಚಾಯತ ರಾಜ್ಯ ವ್ಯವಸ್ಥೆ

ಮಹಾತ್ಮ ಗಾಂಧೀಜಿಯವರು ನಮ್ಮ ದೇಶದ ಸ್ವಾತಂತ್ರ್ಯ ಪೂರ್ವದಲ್ಲಿ ಗ್ರಾಮ ಸ್ವರಾಜ್ಯದ ಬಗ್ಗೆ ಬಹಳ ದೊಡ್ಡ ಆಶೆಯನ್ನು ಇರಿಸಿಕೊಂಡು ಹಳ್ಳಿಯ ಜನರು ಸಂಪೂರ್ಣವಾಗಿ ದೇಶದ ಯೋಜನೆಗಳನ್ನು ರೂಪಿಸಿಕೊಳ್ಳಬೇಕೆಂದು ಬಯಸಿದ್ದರು. ರಾಷ್ಟ್ರ ಸರಪಳಿಯ ಒಂದೊಂದು ಕೊಂಡಿಯಲ್ಲಿ ರಾಜಕೀಯ ಪ್ರಜಾ ಪ್ರಭುತ್ವವಿರಬೇಕು. ಆಗ ಮಾತ್ರ ಹಿತಕರ ಸಮಾಜವೊಂದನ್ನು ಸ್ಥಾಪಿಸುವದು ಸಾಧ್ಯ.

ಅಧಿಕಾರದ ವಿಕೇಂದ್ರೀಕರಣದ ಬಗ್ಗೆ ಬಹಳ ಆಸಕ್ತಿ ವಹಿಸಿದ ರಾಜಕಾರಣಿಗಳಲ್ಲಿ ಗುಜರಾತ ರಾಜ್ಯದ ಬಲವಂತರಾಯ್ ಮೆಹತಾರವರು ಪ್ರಮುಖರಾಗಿದ್ದರು. ಅವರು ಅತ್ಯಂತ ಆಸಕ್ತಿ ವಹಿಸಿ ಗುಜರಾತ ರಾಜ್ಯದಲ್ಲಿ ಈ ಮಸೂದೆಯನ್ನು ಮೊದಲ ಬಾರಿಗೆ ಜಾರಿಗೆ ತಂದರು. ಆದರೆ ಬಲವಂತರಾಯರ ಅಕಾಲ ಮರಣದಿಂದಾಗಿ ಮುಂದಿನ ಪೀಳಿಗೆ ಹೆಚ್ಚಿನ ಆಸಕ್ತಿ ವಹಿಸದ ಕಾರಣ ಈ ಮಸೂದೆಯ ಸಂಪೂರ್ಣವಾದ ಉದ್ದೇಶ ಆ ರಾಜ್ಯ ದಲ್ಲಿಯೇ ಈಡೇರಲಿಲ್ಲ. ಜವಾಹರಲಾಲ ನೆಹರೂರವರ ಸಂಪುಟ ದಲ್ಲಿ "ಸಮುದಾಯ ಪ್ರಗತಿ" ಮಂತ್ರಿಗಳಾಗಿದ್ದ ಎಸ್.ಕೆ.ಡೇ.ರವರು ಈ ದಿಶೆಯಲ್ಲಿ ಪ್ರಾಮಾಣಿಕ ಪ್ರಯತ್ನ ನಡೆಸಿ, ದೇಶದ ಎಲ್ಲ ರಾಜ್ಯಗಳಲ್ಲಿ ಈ ಮಸೂದೆಯನ್ನು ತರಲು ಪ್ರಯತ್ನಿಸಿದರೂ ವಿಫಲರಾದರು. ಆದರೆ ಪಶ್ಚಿಮ ಬಂಗಾಲದ ಆಡಳಿತ ಚುಕ್ಕಾಣಿ ಹಿಡಿದ ವಾಮ ರಂಗದ ಸರಕಾರ ತಮ್ಮ ರಾಜ್ಯದಲ್ಲಿ ಯಶಸ್ವಿಯಾಗಿ ಈ ಮಸೂದೆಯನ್ನು ಜಾರಿಗೆ ತಂದು ಜನತೆಯ ಕೈಗೆ ಅಧಿಕಾರ

ವನ್ನು ನೀಡುವಲ್ಲಿ ಪ್ರಸ್ತುತ ಸನ್ನಿವೇಶದಲ್ಲಿ ಗಾಂಧೀಜಿಯವರ ಕನಸನ್ನು ನನಸು ಮಾಡುವ ಯಶಸ್ವಿ ರೂವಾರಿಗಳಾಗಿದ್ದಾರೆ.

೧೯೫೬ರಲ್ಲಿ ರಾಜ್ಯ ಮರು ವಿಂಗಡನೆಯಾದರೂ ಹರಿದು ಹಂಚಿಹೋಗಿದ್ದ ಕರ್ನಾಟಕ (ಆಗಿನ ಮೈಸೂರು) ಬೇರೆ ಬೇರೆ ನೀತಿಯ ಶಾಸನಕ್ಕೆ ಒಳಪಟ್ಟಿತ್ತು. ಕರ್ನಾಟಕ ಗ್ರಾಮ ಪಂಚಾಯತಿ ಹಾಗೂ ೧೯೫೯ ಸ್ಥಳೀಯ ಸಂಸ್ಥೆಗಳ ಕಾನೂನಿನ ಪ್ರಕಾರ ರಾಜ್ಯದಲ್ಲೆಲ್ಲ ಏಕರೂಪ ಶಾಸನ ತರುವ ಪ್ರಥಮ ಪ್ರಯತ್ನ ನಡೆಯಿತು. ಇದು ಕ್ರಾಂತಿಕಾರಿಯಾದ ವಿಧಾನವೇನೂ ಆಗಿರಲಿಲ್ಲ. ಆದರೆ ರಾಜ್ಯದಲ್ಲಿ ಏಕರೂಪತೆಯನ್ನು ಮಾತ್ರ ಸಾಧಿಸಿತು.

ನಮ್ಮ ರಾಷ್ಟ್ರಕ್ಕೆ ಪೂರಕವಾದ ರೀತಿಯಲ್ಲಿ ಮೆಹತಾ ಸಮಿತಿಯ ಶಾಸನವನ್ನು ಅಳವಡಿಸಲು ಶ್ರೀ ಕೊಂಡಜ್ಜಿ ಬಸಪ್ಪನವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ನೇಮಿಸಲಾಯಿತು. ೧೯೬೩ರಲ್ಲಿ ಈ ಸಮಿತಿ ಕೊಟ್ಟ ವರದಿ ಆಧಾರದ ಮೇಲೆ ಗ್ರಾಮ ಮಟ್ಟದ ಅಧಿಕಾರ ವಿಕೇಂದ್ರಿಕರಣದ ಅಂದರೆ ಪಂಚಾಯತಿ ರಾಜ್ಯದ ಒಂದು ಮಸೂದೆಯನ್ನು ಸರಕಾರ ೧೯೬೪ರಲ್ಲಿ ಸ್ವೀಕರಿಸಿತು. ಆಗ ಗ್ರಾಮಾಭಿವೃದ್ಧಿ ಸಚಿವರಾಗಿದ್ದ ಶ್ರೀ ರಾಮಕೃಷ್ಣ ಹೆಗಡೆಯವರ ನೇತೃತ್ವದ ಆಯ್ಕೆ ಸಮಿತಿ ಇದನ್ನು ಬಲವಾಗಿ ಪ್ರತಿಪಾದಿಸಿ ಪಂಚಾಯತಿ ರಾಜ್ಯ ವ್ಯವಸ್ಥೆ ಜಾರಿಗೊಳಿಸಿ ಅಧಿಕಾರ ವಿಕೇಂದ್ರಿಕರಿಸಬೇಕೆಂದಿತು. ಆದರೆ ಆಗಿನ ಸರಕಾರ ಇದನ್ನೂ ಕಾರ್ಯರೂಪಕ್ಕೆ ತರಲು ಒಪ್ಪಲಿಲ್ಲ.

ಎರಡು ದಶಕಗಳ ನಂತರ ರಾಮಕೃಷ್ಣ ಹೆಗಡೆಯವರ ನೇತೃತ್ವದ ಜನತಾ ಸರಕಾರ ಅಧಿಕಾರಕ್ಕೆ ಬಂದಮೇಲೆ, ಮೂಲೆ

ಹಿಡಿದು ಧೂಳು ತಿನ್ನುತ್ತಿದ್ದ ಈ ಶಾಸನಕ್ಕೆ ಹೊಸರಕ್ತ ಮೂಡಿತು.

೧೯೮೩ ರ ಮಾರ್ಚ ತಿಂಗಳಲ್ಲಿ ಕರ್ನಾಟಕ ಶಾಸಕಾಂಗದ ಉಭಯ ಸದನಗಳಲ್ಲಿ ಸ್ಥಳೀಯ ಸರಕಾರಗಳಿಗೆ ಸಂಬಂಧಿಸಿದಂತೆ ಒಂದು ಮಸೂದೆ ಪಾಸಾಯಿತು, ಇದಕ್ಕೆ ನಮ್ಮ ರಾಷ್ಟ್ರಪತಿಗಳು ೧೯೮೫ ಜುಲೈ ೧೦ ರಂದು ತಮ್ಮ ಅಂಕಿತ ಹಾಕಿದರು ಇದೇ "ಕರ್ನಾಟಕ ಜಿಲ್ಲಾ ಪರಿಷತ್, ಮಂಡಲ ಪಂಚಾಯತಿ ಮತ್ತು ನ್ಯಾಯ ಪಂಚಾಯತಿಗಳ ಕಾಯ್ದೆ" ಕರ್ನಾಟಕ ರಾಜ್ಯ ಸರಕಾರ ತನ್ನ ರಾಜ್ಯ ಪತ್ರದಲ್ಲಿ ಪ್ರಕಟಗೊಳಿಸಿದ ಪ್ರಕಾರ ಈ ಕಾಯ್ದೆ ೧೯೮೫ ಅಗಷ್ಟ ೧೪ ನೇ ತಾರೀಖಿನಿಂದ ಜಾರಿಗೆ ಬಂದಿತು.

ಗ್ರಾಮೀಣ ಪ್ರದೇಶಗಳಲ್ಲಿ, ಜಿಲ್ಲಾ ಪರಿಷತ್ ಮಂಡಲ ಪಂಚಾಯತಿಗಳು ಮತ್ತು ನ್ಯಾಯ ಪಂಚಾಯತಿಗಳನ್ನು ರಚಿಸಿ, ಅಧಿಕಾರವನ್ನೂ ಈ ಸ್ಥಳೀಯ ಸರಕಾರಗಳಿಗೆ ವರ್ಗಾಯಿಸುವದೇ ಈ ಕಾಯ್ದೆಯ ಮುಖ್ಯ ಉದ್ದೇಶ.

ನಗರ ಸಭೆ ಹಾಗೂ ಮಹಾನಗರ ಸಭೆಯನ್ನು ಈ ಶಾಸನದ ಅಡಿಯಲ್ಲಿ ತರಲಾಗಿಲ್ಲ. ತ್ರೀ-ಪಂಕ್ತಿಯ ಈ ಶಾಸನದಲ್ಲಿ ಗ್ರಾಮಸಭೆ ಹಾಗೂ ಮಂಡಲ ಮಟ್ಟದಲ್ಲಿ ನ್ಯಾಯ ಪಂಚಾಯತಿಯನ್ನು ಅಳವಡಿಸಲಾಗದ, ಆದರೆ ಮೊದಲಿನ ಐದು ವರ್ಷಗಳವರೆಗೆ ನ್ಯಾಯ ಪಂಚಾಯತಿಯನ್ನು ಜಾರಿಗೊಳಿಸಲಾಗಿಲ್ಲ ಇದರ ಗ್ರಾಮದ ಸೆಳೆಯುವ ಅಂಶಗಳೆಂದರೆ.

ಗ್ರಾಮ ಸಭೆ :

ಮಂಡಲ ಪಂಚಾಯತಿಯ ನಿಯಮದ ೩ ನೇ ಪ್ರಕರಣವು ಗ್ರಾಮ ಸಭೆಯ ರಚನೆ ಮತ್ತು ಆದರ ಕಾರ್ಯವ್ಯಾಪ್ತಿಯನ್ನು ನಿಗದಿಪಡಿಸುತ್ತದೆ. ಜಿಲ್ಲಾ ಪರಿಷತ್ ಚುನಾವಣೆಗಳಲ್ಲಿನ ಒಂದು

ಗ್ರಾಮದ ಮತದಾರರ ಯಾದಿಯಲ್ಲಿ ಇರುವವರೆಲ್ಲರೂ ಈ ಸಭೆಯ ಸದಸ್ಯರೂ (ವರ್ಷದಲ್ಲಿ ಕನಿಷ್ಠ ಎರಡು ಸಲವಾದರೂ ಸಭೆ ಸೇರಿ ಈ ಕೆಳಗಿನ ವಿಷಯಗಳನ್ನು ಚರ್ಚಿಸಬೇಕಾಗುತ್ತದೆ) ತಮ್ಮ ಗ್ರಾಮದ ಅಭಿವೃದ್ಧಿ ಕಾರ್ಯಕ್ರಮಗಳ ಸ್ಥಿತಿ ಗತಿ, ಗ್ರಾಮ ಜನರ ಐಕ್ಯತೆ ಹಾಗೂ ಉದ್ಧಾರಕ್ಕೆ ಹೊಸ ಯೋಜನೆಗಳನ್ನು ರೂಪಿಸುವದು, ಗ್ರಾಮದಲ್ಲಿ ಭೂ ಸೇನೆಯನ್ನು ಕಟ್ಟುವದು, ವಯಸ್ಕರ ಶಿಕ್ಷಣ ಕಾರ್ಯಕ್ರಮ, ಗ್ರಾಮಸ್ವಚ್ಛತೆಗೆ ಶ್ರಮದಾನ. ಒಟ್ಟಾರೆ ಗ್ರಾಮ ಸಭೆ ತನ್ನ ಗ್ರಾಮದ ಸರ್ವತೋಮುಖ ಅಭಿವೃದ್ಧಿಗೆ ಯೋಜನೆಗಳನ್ನು ರೂಪಿಸುತ್ತದೆ ಅಲ್ಲದೇ ಮಂಡಲ ಪಂಚಾಯತಿಗಳಿಗೆ ಸಹಕಾರಿಯಾಗಿ ವರ್ತಿಸುತ್ತದೆ. ಮಂಡಲ ಪಂಚಾಯತಿಯ ಪ್ರಧಾನರು ಗ್ರಾಮ ಸಭೆಯ ಅಧ್ಯಕ್ಷತೆಯನ್ನು ವಹಿಸುತ್ತಾರೆ.

ಮಂಡಲ ಪಂಚಾಯತಿ

ಮಂಡಲ ಪಂಚಾಯತಿಯ ಕಾಯ್ದೆಯ ಅಧಿನಿಯಮದ ೪ ನೇ ಪ್ರಕರಣದ ಪ್ರಕಾರ ೧೦೦೦೦ ಜನಸಂಖ್ಯೆಗೆ ಕಡಿಮೆ ಇಲ್ಲದೇ ಅಥವಾ ೧೧೦೦೦ ಜನ ಸಂಖ್ಯೆಗೆ ಮೀರದ ಜನಸಂಖ್ಯೆಯುಳ್ಳ ವ್ಯಾಪ್ತಿಗೆ ಒಂದು ಮಂಡಲವೆಂದು ಕರೆಯಲಾಗಿದೆ. ತಾಲೂಕಿನ ಮಂಡಳಗಳನ್ನು ಜಿಲ್ಲಾಧಿಕಾರಿಗಳು ಉಪಯೋಗಿಸುತ್ತಾರೆ. ೧೯೮೪ ನೇ ಆಗಷ್ಟ ೫ ನೇ ತಾರೀಖು ಸರಕಾರ ಹೊರಡಿಸಿದ ಸೂಚನೆಯಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಮಂಡಳ ಪಂಚಾಯತಿಯ ಸರಾಸರಿ ಜನಸಂಖ್ಯೆ ೧೨೫೦೦ ಇರಬೇಕೆಂದು ಆದೇಶಿಸಿದೆ. ಮಲೆನಾಡು ಜಿಲ್ಲೆಗಳಾದ ಚಿಕ್ಕಮಂಗಳೂರ, ಶಿವಮೊಗ್ಗಾ,

ಕೊಡಗು, ದಕ್ಷಿಣ ಕನ್ನಡ ಹಾಗೂ ಉತ್ತರ ಕನ್ನಡ ಜಿಲ್ಲೆಗಳಲ್ಲಿ ೭೫೦೦ ಜನಸಂಖ್ಯೆಗೆ ಒಂದರಂತೆ ಮಂಡಲ ರಚಿಸಲಾಗಿದೆ.

ಮಂಡಲದ ಪ್ರತಿ ೫೦೦ ಜನಸಂಖ್ಯೆಗೆ, ಅಥವಾ ಅದರ ಒಂದು ಭಾಗಕ್ಕೆ ಒಬ್ಬರಂತೆ ಸದಸ್ಯರನ್ನೂ ಚುನಾವಣೆಯ ಮೂಲಕ ಆಯ್ಕೆ ಮಾಡಬೇಕಾಗುತ್ತದೆ. ಅಂದರೆ ಒಂದು ಮಂಡಳದಲ್ಲಿ ಸುಮಾರು ೨೦_೨೨ ಸದಸ್ಯರಿರುತ್ತಾರೆ, ಇದರಲ್ಲಿ ಶೇಕಡಾ ೨೫ ರಷ್ಟು ಸ್ಥಾನಗಳನ್ನು ಮಹಿಳೆಯರಿಗೆ (ಅದರಲ್ಲಿ ಒಬ್ಬಳು ಪರಿಶಿಷ್ಟ ಜಾತಿಗೆ ಸೇರಿರಬೇಕು) ಶೇಕಾಡಾ ೧೮ ಕ್ಕೆ ಕಡಿಮೆ ಇಲ್ಲದಷ್ಟು. ಸ್ಥಾನಗಳನ್ನು ಪರಿಶಿಷ್ಟ ಜಾತಿ ಹಾಗೂ ಜನಾಂಗಕ್ಕೆ ವಿಸ್ತರಿಸಲಾಗಿದೆ. ಹಿಂದುಳಿದ ವರ್ಗದಿಂದ ಯಾರೂ ಚುನಾಯಿತರಾಗದಿದ್ದಲ್ಲಿ ಸರಕಾರ ಇಬ್ಬರನ್ನು ನಾಮಕರಣ ಮಾಡುವದು. ಸೇವಾ ಕೇಂದ್ರದ ಪ್ರಧಾನ ಕಛೇರಿ ಕನಿಷ್ಠ ೨೦೦೦ ಜನಸಂಖ್ಯೆಯುಳ್ಳ ಹಳ್ಳಿಯಲ್ಲಿ ಸ್ಥಾಪಿತವಾಗುವದು. ಅಧಿಕಾರವಧಿ ೫ ವರ್ಷಗಳು. ಚುನಾಯಿತಗೊಂಡ ಸದಸ್ಯರು ತಮ್ಮಲ್ಲಿಯೇ ಪ್ರಧಾನ ಹಾಗೂ ಉಪಪ್ರಧಾನರನ್ನು ಆಯ್ಕೆಮಾಡಿಕೊಳ್ಳುವರು. ಇವರಿಗೆ ತಿಂಗಳಿಗೆ ಕ್ರಮವಾಗಿ ೩೦೦ ಹಾಗೂ ೧೫೦ ರೂಗಳ ಸಂಭಾವನೆ ಕೊಡಲಾಗುವದು. ಇವರ ಮೇಲೆ ಅವಿಶ್ವಾಸಗೊತ್ತುವಳಿ ಸ್ವೀಕರಿಸಬೇಕಾದಲ್ಲಿ ೨:೩ ದಷ್ಟು ಬಹುಮತ ಇರಬೇಕು. ಸದಸ್ಯತ್ವಕ್ಕೆ ರಾಜೀನಾಮೆ ಅವಿಶ್ವಾಸಗೊತ್ತುವಳಿ ಮುಂತಾದವುಗಳನ್ನೂ ಜಿಲ್ಲಾಧಿಕಾರಿಗಳಿಗೆ ಸಲ್ಲಿಸಬೇಕಾಗುವದು.

ಮಂಡಳ ಪಂಚಾಯತಿಯ ಕಾರ್ಯಗಳನ್ನು ಮೂರು ಭಾಗಗಳಲ್ಲಿ ವರ್ಗೀಕರಿಸಲಾಗಿದೆ.

ಮಾಡಲೇ ಬೇಕಾದ ಕಾರ್ಯಗಳು :- ಗ್ರಾಮಗಳಲ್ಲಿ ...ರ್ಮಲ್ಯ ಹಾಗೂ ಆರೋಗ್ಯಕ್ಕೆ ಪೂರಕವಾದ ಮೂಲ ಸೌಲಭ್ಯ ...ದಗಿಸುವದು ಅಂದರೆ ಕೆರೆ ಭಾವಿಗಳ ನಿರ್ಮಾಣ ಹಾಗೂ ...ರಸ್ತಿ, ನೀರಿನ ಪೂರೈಕೆ, ಸಾರ್ವಜನಿಕ ಶೌಚಾಲಯ ...ಮುಂತಾದವುಗಳ ನಿರ್ವಹಣೆ ರಸ್ತೆ ಮತ್ತು ಚರಂಡಿಗಳ ನಿರ್ಮಾಣ ...ಗೂ ದುರಸ್ತಿ, ದನಗಳಿಗೆ ಹುಲ್ಲು ಗಾವಲಿನ ವ್ಯವಸ್ಥೆ, ತನ್ನ ...ತ್ರದ ಒಕ್ಕಲುತನ ಹುಟ್ಟುವಳಿಯ ಯೋಜನೆ ತಯಾರಿಸುವದು, ..., ಬೀಜ, ಗೊಬ್ಬರ ಮತ್ತು ಕೀಟನಾಶಕಗಳನ್ನು ಸಂಗ್ರಹಿಸುವದು ...ತ್ತು ಸುಧಾರಿತ ಬೇಸಾಯ ಕ್ರಮಗಳನ್ನು ಅನುಸರಿಸಲು ಕ್ರಮ ...ದುಕೊಳ್ಳಬೇಕು.

ಹಿಂದುಳಿದ ಜನಾಂಗದ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ...ತ್ತು ಸಾಂಸ್ಕೃತಿಕ ಅಭಿವೃದ್ಧಿ ಸಾಧಿಸುವದು.

ಸ್ವಂತ ವಿವೇಚನಾಯುಕ್ತ ಕಾರ್ಯಗಳು :- ...ರೋಗ್ಯ ಶಿಕ್ಷಣ ಮುಂತಾದವುಗಳಿಗಾಗಿ ತೆಗೆದುಕೊಳ್ಳಬೇಕಾದ ...ಷ್ಟಿನ ಅನಿವಾರ್ಯ ಕ್ರಮಗಳು.

ವರ್ಗಾಯಿಸಿದ ಕಾರ್ಯಗಳು :- ...ಸರಕಾರದಿಂದ ಒಪ್ಪಿಸಲ್ಪಟ್ಟ ಕಾರ್ಯ ಉದಾ : ಅರಣ್ಯ ನಿರ್ವ-...ಣೆ, ನಿರುಪಯುಕ್ತ ಭೂಮಿಯ ನಿರ್ವಹಣೆ.

...ಮಂಡಳ ಪಂಚಾಯತಿಯು ಈ ಕೆಳಗಿನ ಮೂರು ಕಾರ್ಯಕಾರೀ ...ಮಿತಿಗಳ ಮೂಲಕ ತನ್ನ ಕಾರ್ಯ ನಿರ್ವಹಿಸುತ್ತದೆ.

ಎ) ಉತ್ಪಾದನಾ ಸಮಿತಿ :-ಒಕ್ಕಲುತನ, ಪಶುಸಂಗೋಪನೆ, ಗ್ರಾಮೀಣ ಔದ್ಯೋಗೀಕರಣ, ಮುಂತಾದವುಗಳನ್ನು ನೋಡಿ ಕೊಳ್ಳುವದು.

ಬಿ) ಸಾಮಾಜಿಕ ನ್ಯಾಯ ಸಮಿತಿ :– ಪರಿಶಿಷ್ಟ ಜಾತಿ, ಜನಾಂಗ, ಹಿಂದುಳಿದ ವಂಗಡ ಹಾಗೂ ಮಹಿಳೆಯರ ಹಿತ ರಕ್ಷಣೆ.

ಸಿ) ನಾಗರಿಕ ಸೌಕರ್ಯ ಸಮಿತಿ :–
ಶಿಕ್ಷಣ, ಸಾರ್ವಜನಿಕ ಆರೋಗ್ಯ ಹಾಗೂ ಸಾರ್ವಜನಿಕ ಕಾಮಗಾರಿ.

ಹಣಕಾಸು :— ಸರಕಾರ ಅಥವಾ ಜಿಲ್ಲಾ ಪರಿಷತ್‌ನಿಂದ ಒದಗಿಸಿದ ಧನ ಸಹಾಯ, ಮನೆ ಪಟ್ಟಿ, ಕಟ್ಟಡಗಳ ತೆರಿಗೆ, ಮನರಂಜನೆಯ ತೆರಿಗೆ, ಪೇಟೆ ಸುಂಕ, ನೀರಿನ ಕರ ಮುಂತಾದವುಗಳ ಮೂಲಕ ಕ್ರೋಢೀಕರಿಸಲಾಗುವದು. ಮೇಲಿನ ಎಲ್ಲ ಮೂಲದಿಂದ ಬರುವ ಹಣ ಅತ್ಯಲ್ಪ ಸುಮಾರು ೨೦,೦೦೦ರೂ ಮತ್ತು ಸರಕಾರ ಪ್ರತಿ ಮಂಡಳಕ್ಕೆ ೧೦೦೦೦೦ ರೂ ಧನ ಸಹಾಯ ನೀಡುವದು.

ತಾಲೂಕ ಪಂಚಾಯತ ಸಮಿತಿ :

ಈ ಸಮಿತಿಯು ಸದಸ್ಯರುಗಳೆಂದರೆ ಆ ತಾಲೂಕಿನಿಂದ ಆಯ್ಕೆಯಾದ ಜಿಲ್ಲಾ ಪರಿಷತ್ ಸದಸ್ಯರು, ತಾಲೂಕಿನ ಶಾಸಕರು, ಮಂಡಳ ಪಂಚಾಯತಗಳ ಪ್ರಧಾನರು, ಭೂ ಅಭಿವೃದ್ಧಿ ಬ್ಯಾಂಕಿನ ಅಧ್ಯಕ್ಷರು, ತಾಲೂಕ ಒಕ್ಕಲುತನ ಹುಟ್ಟುವಳಿ ಸಹಕಾರಿ ಮಾರಾಟ ಸಂಘದ ಅಧ್ಯಕ್ಷ, ಪರಿಶಿಷ್ಟ ಜಾತಿ, ಜನಾಂಗ, ಹಿಂದುಳಿದ ವರ್ಗ ಹಾಗೂ ಮಹಿಳೆಯರ ವಿಭಾಗದಿಂದ ಕೋ-ಆಫ್ ಮಾಡಿಕೊಂಡ ಐದು ಜನ ಸದಸ್ಯರು ಆ ತಾಲೂಕಿನ ಶಾಸಕ ಸಮಿತಿಯ ಕಾರ್ಯಾಧ್ಯಕ್ಷನಾಗಿದ್ದು, ಕ್ಷೇತ್ರಾಭಿವೃದ್ಧಿ ಅಧಿಕಾರಿ ಕಾರ್ಯದರ್ಶಿ

ಾಗಿದ್ದು ಕಾರ್ಯ ನಿರ್ವಹಿಸುವರು.

ಎಲ್ಲ ಅಭಿವೃದ್ಧಿ ಕಾರ್ಯಕ್ರಮಗಳ ಮೇಲ್ವಿಚಾರಣೆ, ತಾಲೂಕ ಮಟ್ಟದ ಯಾವುದೇ ಅಭಿವೃದ್ಧಿ ಕಾರ್ಯಕ್ರಮದ ತನಿಖೆ, ಮಂಡಳ ಪಂಚಾಯತಿಗಳ ಕೆಲಸದ ನಿಯತಕಾಲಿಕ ಪರಿಶೀಲನೆ, ಮಾರ್ಗದರ್ಶನ ಮತ್ತು ನೆರವು ನೀಡಿಕೆ ಇವರ ಅಧಿಕಾರಾವಧಿ ೫ ವರ್ಷಗಳು.

ಜಿಲ್ಲಾ ಪರಿಷತ್ತು

೧೯೮೫ರ ಜಿಲ್ಲಾ ಪರಿಷತ್ತುಗಳ ನಿಯಮದ ೧೩೮(೧)ನೇ ಪ್ರಕರಣದ ಪ್ರಕಾರ ಪ್ರತಿಯೊಂದು ಜಿಲ್ಲೆಗೆ ಒಂದು ಜಿಲ್ಲಾ ಪರಿಷತ್ ಇರಲು ಅವಕಾಶವಿದೆ. ೧೪೦ನೇ ಪ್ರಕರಣವು ಜಿಲ್ಲಾ ಪರಿಷತ್ತಿನ ಸದಸ್ಯರ ಬಗ್ಗೆ ವಿವರಣೆ ನೀಡುತ್ತದೆ. ಇದರಲ್ಲಿ ಚುನಾಯಿತ ಹಾಗೂ ನಾಮಕರಣಗೊಂಡ ಸದಸ್ಯರಿರುತ್ತಾರೆ.

ಚುನಾಯಿತ ಸದಸ್ಯರು : ಪ್ರತಿ ೩೫೦೦೦ ಜನರಿಗೆ ಒಬ್ಬರಂತೆ (ಕೊಡಗು ಜಿಲ್ಲೆಯಲ್ಲಿ ೧೫೦೦೦ ಕ್ಕೆ ಒಬ್ಬರಂತೆ) ಪ್ರತಿನಿಧಿಗಳನ್ನು ನೇರ ಚುನಾವಣೆ ಮೂಲಕ ಆಯ್ಕೆ ಮಾಡಲಾಗುವದು. ೧೮ ವರ್ಷಕ್ಕೆ ಮೇಲ್ಪಟ್ಟ ವಯಸ್ಸಿನವರೆಲ್ಲರಿಗೂ ಮತಾಧಿಕಾರ ಉಂಟು. ಚುನಾವಣೆಗೆ ಸ್ಪರ್ಧಿಸಬೇಕಾದರೆ ೨೫ ವರ್ಷಕ್ಕೂ ಮೀರಿರಬೇಕು. ಹೀಗೆ ಚುನಾಯಿತರಾಗುವವರ ಸಂಖ್ಯೆಯಲ್ಲಿ ಶೇಕಡಾ ೨೫ ರಷ್ಟು ಮಹಿಳೆಯರು ಮತ್ತು ಶೇಕಡಾ ೧೮ ಕ್ಕೆ ಕಡಿಮೆ ಇಲ್ಲದಷ್ಟು ಪರಿಶಿಷ್ಟ ಜಾತಿ ಜನಾಂಗಕ್ಕೆ ಮೀಸಲಾತಿ ಕಲ್ಪಿಸಲಾಗಿದೆ.

ಸಹ ಸದಸ್ಯತ್ವ :- ಜಿಲ್ಲಾ ಸಹಕಾರೀ ಬ್ಯಾಂಕಿನ ಅಧ್ಯಕ್ಷರು ಸಹ ಸದಸ್ಯರಾಗುವರು. ಇವರು ಸಭೆಯಲ್ಲಿ ಭಾಗವಹಿಸುವರು. ಆದರೆ ಇವರಿಗೆ ಮತದಾನದ ಹಕ್ಕಿರುವದಿಲ್ಲ.

ನಾಮಕರಣಗೊಂಡ ಸದಸ್ಯರು :

ಜಿಲ್ಲೆಯ ಎಲ್ಲ ಸಂಸತ್ ಸದಸ್ಯರು, ವಿಧಾನ ಸಭೆ ಹಾಗೂ ವಿಧಾನ ಪರಿಷತ್ ಸದಸ್ಯರುಗಳು.

ಅಧ್ಯಕ್ಷ, ಉಪಾಧ್ಯಕ್ಷ ಹಾಗೂ ಕಾರ್ಯದರ್ಶಿಗಳು :

ಜಿಲ್ಲಾ ಪರಿಷತ್ತಿಗೆ ಚುನಾಯಿತರಾದ ಸದಸ್ಯರುಗಳು ತಮ್ಮ ಅಧ್ಯಕ್ಷ ಹಾಗೂ ಉಪಾಧ್ಯಕ್ಷರುಗಳನ್ನು ಚುನಾಯಿಸಿಕೊಳ್ಳುತ್ತಾರೆ. ಇವರ ಅಧಿಕಾರಾವಧಿ ಐದು ವರ್ಷ, ಅಧ್ಯಕ್ಷರಿಗೆ ರಾಜ್ಯ ಸಚಿವರ, ಉಪಾಧ್ಯಕ್ಷರಿಗೆ ಉಪ ಸಚಿವರ ಸಂಭಾವನೆ ಕೊಡಲಾಗುವದು. ಜಿಲ್ಲಾಧಿಕಾರಿಯವರನ್ನು ಇದರ ಮುಖ್ಯ ಕಾರ್ಯದರ್ಶಿ ಎಂದು ನಾಮಕರಣ ಮಾಡಲಾಗುವದು. ಒಬ್ಬ ಮುಖ್ಯ ಲೆಕ್ಕ ಪತ್ರಾಧಿಕಾರಿಯಲ್ಲದೇ, ಇನ್ನೂಳಿದ ಸಿಬ್ಬಂದಿಯನ್ನು ಸಹ ಒದಗಿಸಲಾಗುವುದು.

ಕಾರ್ಯ ವಿಧಾನ : ಈ ಕೆಳಗಿನ ಹೊಂದಾಣಿಕೆಯ ಮೇಲ್ವಿಚಾರಕ ಮತ್ತು ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವದು.

ಒಕ್ಕಲುತನ ಅಭಿವೃದ್ಧಿ ಬೀಜೋತ್ಪಾದನಾ ಕೇಂದ್ರಗಳ ಸ್ಥಾಪನೆ ಪರಿಶಿಷ್ಟ ಜಾತಿ ಜನಾಂಗ ಮತ್ತು ಹಿಂದುಳಿದ ವರ್ಗಗಳ ಹಿತರಕ್ಷಣೆ, ಸಾರ್ವಜನಿಕ ಆರೋಗ್ಯ ತೋಟಗಾರಿಕೆ ಹಾಗೂ ನೀರಾವರಿ ಸೌಲಭ್ಯ, ಗ್ರಾಮೀಣ ಉದ್ಯಮಗಳ ಅಭಿವೃದ್ಧಿ ಶೈಕ್ಷಣಿಕ ಚಟುವಟಿಕೆ ಇತ್ಯಾದಿ.

ಜಿಲ್ಲೆಯ ಒಟ್ಟಾರೆ ಅಭಿವೃಧ್ಧಿ ಯೋಜನೆ ತಯಾರಿಸಿ ಕಾರ್ಯರೂಪಕ್ಕೆ ತರುವದು ಇದರ ಮುಖ್ಯ ಕೆಲಸ.

ಸಮಿತಿಗಳು : ಜಿಲ್ಲಾ ಸಮಿತಿ ಸಕ್ರಿಯವಾಗಿ ಕಾರ್ಯ ನಿರ್ವಹಿಸಲು ಅನುಕೂಲವಾಗುವಂತೆ ೫ ಸಮಿತಿಗಳನ್ನು ರಚಿಸಲು ಅವಕಾಶ ಕಲ್ಪಿಸಲಾಗಿದೆ ಅವುಗಳೆಂದರೆ:-

ಸಾಮಾನ್ಯ, ಹಣಕಾಸು, ಲೆಕ್ಕ ಪತ್ರ ಯೋಜನೆ, ಸಾಮಾಜಿಕ ನ್ಯಾಯ, ಸಾರ್ವಜನಿಕ ಕಾಮಗಾರಿ ಹಾಗೂ ಸೌಕರ್ಯಗಳು, ಒಕ್ಕಲುತನ ಆದರ ಸೌಕರ್ಯ ಹಾಗೂ ಪಶು ಸಂಗೋಪನೆ, ಶೈಕ್ಷಣಿಕ ಆರೋಗ್ಯ ಮತ್ತು ಔದ್ಯೋಗಿಕ.
ಮತ್ತು ಔದ್ಯೋಗಿಕ.

ಹಣಕಾಸು :

ರಾಜ್ಯ ಸರಕಾರ ಪ್ರತಿ ಜಿಲ್ಲಾ ಪರಿಷತ್ತಿಗೆ ಸುಮಾರು ೨ ಕೋಟಿ ರೂ. ಗಳನ್ನು ಬಿಡುಗಡೆ ಮಾಡುವುದು ಪರಿಷತ್ತಿಗೆ ಬರುವ ದಂಡ ಆಸ್ತಿಯಿಂದ ಬರುವ ಭಾಡಿಗೆ, ಮಾರಾಟ ಮಾಡಿದ ಜಮೀನಿನಿಂದ ಬರುವ ಉತ್ಪನ್ನ.

ಮಂಡಲ ಪಂಚಾಯತಗಳ ಮೇಲೆ ಜಿಲ್ಲಾ ಪರಿಷತ್ ವಿಶೇಷ, ಅಧಿಕಾರ ಹೊಂದಿದೆ. ಇಚ್ಛಿಸಿದಲ್ಲಿ ಮಂಡಲ ಪಂಚಾಯತವನ್ನು ವಿಸರ್ಜಿಸುವ ಹಕ್ಕು ಜಿಲ್ಲಾ ಪರಿಷತ್ತಿಗಿದೆ.

೪. ಪ್ರಜಾಪ್ರಭುತ್ವದ ಅವಶ್ಯಕ ಅಂಶಗಳು ನಮ್ಮ ಗ್ರಾಮೀಣ ಜನತೆಯಲ್ಲಿ ಇವೆಯೆ?

ನಮ್ಮ ದೇಶ ಇಡೀ ಪ್ರಪಂಚದಲ್ಲಿಯೇ ಅತ್ಯಂತ ದೊಡ್ಡದಾದ ಪ್ರಜಾಪ್ರಭುತ್ವ ದೇಶ. ಎರಡನೆಯ ಮಹಾಯುದ್ಧದ ನಂತರ ಸ್ವಾತಂತ್ರ್ಯ ಪಡೆದುಕೊಂಡು ೩ ನೇಯ ವಿಶ್ವದ ರಾಷ್ಟ್ರಗಳಲ್ಲಿ ಪ್ರಜಾಪ್ರಭುತ್ವವನ್ನು ಉಳಿಸಿಕೊಂಡು ಬೆಳೆಸಿಕೊಂಡು ಬಂದ ಒಂದೇ ಒಂದು ದೇಶವೆಂದರೆ ನಮ್ಮ ಭಾರತ. ನಾವು ಅಲ್ಪ ತೃಪ್ತರಾಗದೆ ನಮ್ಮ ದೋಷಗಳೇನು ಎಂಬುದನ್ನು ಅರಿತುಕೊಂಡು ಅವುಗಳನ್ನು ನಿವಾರಿಸುವ ಪ್ರಯತ್ನ ಮಾಡಿದರೇನೇ ನಮ್ಮ ಪ್ರಜಾಪ್ರಭುತ್ವ ಭದ್ರವಾಗಿ ನಿಲ್ಲಬಲ್ಲದು.

ನಮ್ಮ ಪ್ರಜಾಪ್ರಭುತ್ವಕ್ಕೆ ಜೀವಂತಿಕೆ ಬರಬೇಕಾದರೆ ನಮ್ಮ ಜನ ಸತ್ವಶಾಲಿಗಳಾಗಬೇಕು. ಪ್ರಜಾಪ್ರಭುತ್ವಕ್ಕೆ ಪೂರಕವಾದ ವಿಚಾರ ಹಾಗೂ ಆಚಾರಗಳನ್ನು ಮೈಗೂಡಿಸಿಕೊಳ್ಳಬೇಕು. ಕಾಯಾ, ವಾಚಾ, ಮನಸಾ ಆ ತತ್ವಗಳನ್ನು ಪಾಲಿಸಬೇಕು. ಈ ತತ್ವಗಳು ಬೇರೂರದೇ ಹೋದರೆ ಸರ್ವರ ಹಾಗೂ ದೇಶದ ನಾಶ ಖಂಡಿತ. ಇಲ್ಲವೆ ಸರ್ವಾಧಿಕಾರ ಬೆಳೆಯಲು ಅವಕಾಶಕೊಟ್ಟಂತೆ.

ಈ ತತ್ವಗಳು ನಮ್ಮಲ್ಲಿ ರಕ್ತಗತವಾಗಬೇಕು. ಪ್ರಜಾಪ್ರಭುತ್ವದ ತತ್ವಗಳನ್ನು ನಾವು ಕೇವಲ ನಮ್ಮ ರಾಜಕೀಯ ಜೀವನಕ್ಕಷ್ಟೇ ಅನ್ವಯಿಸಿಕೊಳ್ಳದೇ, ಜೀವನದ ಎಲ್ಲಾ ಕ್ಷೇತ್ರಗಳಲ್ಲಿಯೂ ಈ ತತ್ವಗಳು ನಮ್ಮ ನಡುವಳಿಕೆಯ ಅವಿಭಾಜ್ಯ ಅಂಗವಾಗಿರಬೇಕು. (Democracy is not only a Government but it should be a way of life) ನಮ್ಮ ಜನ ಸಾಮಾಜಿಕ

ಸಂಪ್ರದಾಯಗಳನ್ನು ಎಷ್ಟೇ ಕಷ್ಟ ಬಂದರೂ ಬಿಡದೆ ತಪ್ಪದೇ ಅನುಸರಿಸಿಕೊಂಡು ಬಂದಂತೆ ಪ್ರಜಾಪ್ರಭುತ್ವದ ತತ್ವಗಳನ್ನು ಸಹ ಅನುಸರಿಸಿಕೊಂಡು ಬರುವದು ಅವಶ್ಯವಾಗಿದೆ. ಹಾಗೂ ಅನಿವಾರ್ಯವಾಗಿದೆ. ಇಂಗ್ಲಂಡದ ಜನ ಈ ರೀತಿಯ ಬದುಕನ್ನು ರೂಢಿಸಿಕೊಂಡಿದ್ದಾರೆ. ಅಂತೆಯೇ, ಅವರಿಗೆ ಲಿಖಿತ ಸಂವಿಧಾನವೆ ಇಲ್ಲ. ಆದರೂ ಅದೊಂದು ಪ್ರಪಂಚದ ಅತ್ಯಂತ ಶ್ರೇಷ್ಠ ಪ್ರಜಾಪ್ರಭುತ್ವ ದೇಶ. ನಮ್ಮ ದೇಶದ ಜನತೆ ಇಂಗ್ಲಂಡ ದೇಶದ ಜನರಂತೆ ಮಾರ್ಪಾಡುಗೊಳ್ಳುವವರೆಗೆ ನಮ್ಮ ಪ್ರಜಾಪ್ರಭುತ್ವಕ್ಕೆ ಭದ್ರ ನೆಲೆ ಇಲ್ಲವೆನ್ನಬಹುದು.

ಯಶಸ್ವಿ ಪ್ರಜಾಪ್ರಭುತ್ವದ ಅವಶ್ಯಕ ಅಂಶಗಳೆಂದರೆ

೧. **ರಾಜಕೀಯ ಶಿಕ್ಷಣ** : ವಿದ್ಯಾವಂತ ಜನರು ಪ್ರಜಾಪ್ರಭುತ್ವದ ಬೃಹತ್ ನಿಧಿ. ಅಜ್ಞಾನವೇ ಪ್ರಜಾಪಭ್ರುತ್ವದ ಶತ್ರು ಎಂದು ಹೇಳಿರುವದು ಔಚಿತ್ಯಪೂರ್ಣವಾಗಿದೆ. ಅಜ್ಞಾನದಲ್ಲಿರುವ ಪ್ರಜೆಗಳು ರಾಜಕೀಯ ವಿಷಯಗಳ ಬಗ್ಗೆ ಸಾಕಷ್ಟು ಉತ್ಸಾಹ ತೋರಿಸುವದಿಲ್ಲ. ಶಿಕ್ಷಣವೇ ಪ್ರಜಾಪ್ರಭುತ್ವದ ಅಡಿಗಲ್ಲು. ಶಿಕ್ಷಣವಿಲ್ಲದೇ ಪ್ರಜಾಪ್ರಭುತ್ವ ಯಶಸ್ವಿಯಾಗಲಾರದು. ಕಾರಣ, ಪ್ರಜೆಗಳೇ ಪ್ರಭುಗಳಾಗಿರುವ ಪ್ರಜಾಪ್ರಭುತ್ವದಲ್ಲಿ ಪ್ರಜೆಗಳು ಪ್ರಾಜ್ಞರಾದರೆ ಮಾತ್ರ ಪ್ರಭುತ್ವವು ಪ್ರಬಲವಾಗುತ್ತದೆ. [ಪ್ರಜಾಪ್ರಭುತ್ವ ರಾಜಕೀಯ ಜೀವನಕ್ಕೆ ಸೀಮಿತಗೊಳ್ಳದೆ. ನಿಜಜೀವನದ. ನಿತ್ಯ-ಜೀವನದ ಅವಿಭಾಜ್ಯ ಅಂಗವಾಗಬೇಕು.]

ಪ್ರಭುತ್ವದ ಜವಾಬ್ದಾರಿಯನ್ನು ಹೊತ್ತಿರುವ ಪ್ರಜೆಗಳು ಅವಿದ್ಯಾವಂತರಾದರೆ ಪ್ರಭುತ್ವ ಯಶಸ್ವಿಯಾಗಲಾರದು. ದುರ್ದೈವದ

ವಿಷಯವೆಂದರೆ, ವಿದ್ಯಾವಂತರು ಕಣ್ಣಿದ್ದೂ ಕುರುಡರಾಗಿ ಕಿವಿಯಿದ್ದು ಕಿವುಡರಾಗಿ, ನಾಲಿಗೆಯಿದ್ದೂ ಮೂಕರಾಗಿ, ಹೃದಯ ವಿದ್ದೂ ಭಾವಶೂನ್ಯತೆಯಿಂದ ಬರಡಾದ ಜೀವನವನ್ನು ನಡೆಸುತ್ತಾರೆ. ಪ್ರಾಪಂಚಿಕ ವ್ಯವಹಾರವೇ ಅವರಿಗೇ ಗೊತ್ತಿರುವದಿಲ್ಲ. ರಾಷ್ಟ್ರದ ಜನತೆಗೆ ರಾಜಕೀಯ ಶಿಕ್ಷಣ ನೀಡದೇ ಪ್ರಜಾಪ್ರಭುತ್ವ ಸ್ಥಾಪಿಸಿದ್ದಾದರೆ ಸಂಪೂರ್ಣ ಅರಾಜಕತೆಗೆ ಮಾರ್ಗ ಮಾಡಿ ಕೊಟ್ಟಂತಾಗುತ್ತದೆ. ಪ್ರಜೆಗಳು ಅಜ್ಞಾನದಲ್ಲಿದ್ದರೆ ಸರಕಾರ ತನಗಿಷ್ಟ ಬಂದ ರೀತಿಯಲ್ಲಿ ಆಡಳಿತ ನಡೆಸುವದರಲ್ಲಿ ಸಂಶಯ ವಿಲ್ಲ. ಹಾಗೆಯೇ ಸ್ವಾರ್ಥಪರರಾದ ಕೆಲವು ಮುಂದಾಳುಗಳು ಇಂತಹ ಪ್ರಜೆಗಳನ್ನು ದುರುಪಯೋಗ ಪಡಿಸಿಕೊಳ್ಳುವರು. ಸಾರ್ವತ್ರಿಕ ಮತಾಧಿಕಾರದ ಜೊತೆಗೆ ಪ್ರಜೆಗಳಿಗೆ ಸಾರ್ವತ್ರಿಕ ಶಿಕ್ಷಣವನ್ನು ಕೊಡಿ. ಎಂದು ಜೆ ಎಸ್. ಮಿಲ್ ಹೇಳಿದ್ದುದನ್ನು ಮಾರ್ಗದರ್ಶಿ ಸೂತ್ರವೆಂದು ಪರಿಗಣಿಸಬೇಕು. (Universal suffrage should follow universal education) ರಾಷ್ಟ್ರದ ಜನತೆಯ ನೈತಿಕ ಹಾಗೂ ಬೌದ್ಧಿಕ ಬೆಳವಣಿಗೆಗೆ ಅನುಗುಣವಾಗಿ ಪ್ರಜಾಪ್ರಭುತ್ವದ ಉನ್ನತಿ ಅಥವಾ ಅವನತಿ ಹೊಂದುತ್ತದೆ. ಎಂದು ಹೇಳಿದ ಮಾತು ಪ್ರಜಾಪ್ರಭುತ್ವದ ಮೌಲ್ಯಮಾಪನ ದಂಡವಾಗಿದೆ. (Popular government flourishes and declines in proportion to the moral and intellectual progress of mankind)

ಸರಕಾರವು ಎಲ್ಲ ಹಂತಗಳಲ್ಲಿ ಸಾಧ್ಯವಾದಷ್ಟು ಉಚಿತ ವಿದ್ಯಾಭ್ಯಾಸದ ಅವಕಾಶ ಕಲ್ಪಿಸಿಕೊಡಬೇಕು. ಮಕ್ಕಳಿಗೆ ಕಡ್ಡಾಯ

ಕ್ಷಣವನ್ನು ಹಾಗೂ ವಯಸ್ಕರರಿಗೂ ಶಿಕ್ಷಣವನ್ನು ಕೊಡಬೇಕು ನ್ನುವುದು ಸರಿ. ಸರಕಾರ ಈಗಾಗಲೇ ಈ ಎಲ್ಲ ಅವಕಾಶಗಳನ್ನು ಲ್ಪಿಸಿಕೊಟ್ಟಿದೆ. ಈ ಎಲ್ಲ ಅನುಕೂಲತೆಗಳ ಸೌಲಭ್ಯ ಪಡೆಯು ದು ನಾಗರೀಕರ ಪ್ರಜ್ಞೆಯನ್ನು ಅವಲಂಬಿಸಿದೆ. ಪ್ರಜಾ ಪ್ರಭುತ್ವ ಯಶಸ್ವಿಯಾಗಲು ವಿದ್ಯಾವಂತ ಪ್ರಜೆಗಳು ಗತ್ಯ, ಸರಿಯಾದ ವಿದ್ಯೆಯಿಂದ ಮಾತ್ರ ಪ್ರಜೆಗಳು ತಮ್ಮ ್ಯಕ್ತಿತ್ವವನ್ನು ಬೆಳೆಸಿಕೊಳ್ಳಬಹುದು. ಮತ್ತು ತಮ್ಮ ಸ್ವಾತಂತ್ರ್ಯ ನ್ನು ಕಾಪಾಡಿಕೊಂಡು ದೇಶದ ರಕ್ಷಣೆಯನ್ನು ಮಾಡಬಹುದು. ಪ್ರಜೆಗಳು ಸತ್ಪ್ರಜೆಗಳಾಗಿ ಸುಖ ಹಾಗೂ ನೆಮ್ಮದಿಯಿಂದ ಬಾಳ ಹುದು.

ಸಾಮಾನ್ಯ ಶಿಕ್ಷಣಕ್ಕೆ ಪೂರಕವಾದ ರಾಜಕೀಯ ಶಿಕ್ಷಣವನ್ನು ಶ್ರೀ ಸಾಮಾನ್ಯನಿಗೆ ನೀಡುವ ಸಾಧನ, ಮಾರ್ಗಗಳಾವು ಂಬುದೇ ನಮ್ಮೆದುರಿಗಿದ್ದ ದೊಡ್ಡ ಪ್ರಶ್ನೆ. ಶಾಲೆ ಕಾಲೇಜುಗಳಲ್ಲಿ ರಕಾರದ ತತ್ವಗಳನ್ನು ಹೇಳಬಹುದಾದರೂ ನೇರವಾಗಿ ಸಮ ಾಲೀನ ರಾಜಕಾರಣವನ್ನು ಬಿಡಿಸಿ ಹೇಳುವದು ಆತಂಕಕಾರಕ ೆನಿಸುತ್ತದೆ. ಕಾರಣ ಈ ಕೆಲಸವನ್ನು ಪೂರೈಸಬೇಕಾದರೆ ಜನತೆ ಸಾರ್ವಜನಿಕ ಅಭ್ಯಾಸ ಸಂಸ್ಥೆಗಳನ್ನು ಸ್ಥಾಪಿಸಿಕೊಳ್ಳಬೇಕು. ಪ್ರಜಾ ಪ್ರಭುತ್ವವು ಯಶಸ್ವಿಯಾಗಿ ಮುಂದುವರೆಯಬೇಕಾದರೆ ಆ ದೇಶದ ಪ್ರಜೆಗಳು ತಮ್ಮ ದೇಶದ ಸಮಸ್ತ ಸಮಸ್ಯೆಗಳನ್ನು ಮಗ್ರವಾಗಿ ಅರಿತವರಾಗಿರಬೇಕು; ಹಾಗೂ ಮನ ಅರಿಯುವ ಪ್ರಯತ್ನ ಮುಂದುವರೆಸಬೇಕು. ಆದರೆ ಶ್ರೀಸಾಮಾನ್ಯನ ದೈನಂ- ದಿನ ಜೀವನದ ಕಷ್ಟ ನಷ್ಟಗಳೇ ಬಹಳಷ್ಟಿರುವಾಗ ಈ ವಿಚಾರ

ಅಸಾಧ್ಯವಾದದ್ದೆನಿಸಬಹುದು. ಆದರೂ ಇದು ಜನತೆಯ ಕರ್ತವ್ಯವಾಗಿದೆ. ವ್ಯಕ್ತಿಗತ ಪ್ರಯತ್ನದೊಂದಿಗೆ ಸಾಮೂಹಿಕ ಪ್ರಯತ್ನಗಳೂ ನಡೆಯುವದು ಹೆಚ್ಚು ಶ್ರೇಯಸ್ಕರ.

ಜನ ತಮ್ಮ ವಿರಾಮದ ವೇಳೆಯಲ್ಲಿ ಎಂಟ್ಹತ್ತು ಜನ ಸೇರಿ ಸರಕಾರದ ಆಡಳಿತ, ರಾಜಕೀಯ ಪಕ್ಷಗಳ ಧೋರಣೆ. ದೇಶದ-ಸಮಸ್ಯೆಗಳನ್ನೂ ಬಿಡಿಸುವಲ್ಲಿ ಅವುಗಳ ಪಾತ್ರ, ರಾಜಕೀಯ ಮುಖಂಡರ ಹೇಳಿಕೆ ಮೊದಲಾದವುಗಳನ್ನು ಮುಕ್ತ ಮನಸ್ಸಿನಿಂದ, ವಸ್ತುನಿಷ್ಠವಾಗಿ ಚರ್ಚಿಸಿದರೆ ಅವರ ಆ ಚರ್ಚೆಯು ಇನ್ನೂ ಎಂಟ್ಹತ್ತು ಜನರ ಕಿವಿ ಮುಟ್ಟಿ ಅವರನ್ನೂ ಸ್ವಲ್ಪ ವಿಚಾರಪರರನ್ನಾಗಿ ಮಾಡಿದರೆ ರಾಷ್ಟ್ರಕ್ಕೆ ಅದೊಂದು ಬಹುದೊಡ್ಡ ಸೇವೆ ಆಗಬಲ್ಲದು.

ಗ್ರಾಮದ ಸುಶಿಕ್ಷಿತ ಜನರು ಅಭ್ಯಾಸ ಮಂಡಳಗಳನ್ನು ಕಟ್ಟಿಕೊಂಡು, ಉತ್ಸಾಹೀ ತರುಣರಿಗೆ ಹಲವಾರು ಸಮಸ್ಯೆಗಳನ್ನು ಅಭ್ಯಸಿಸಲು ಪ್ರೇರೇಪಿಸಿ ಅವರಿಗೆ ಅವುಗಳ ಮೇಲೆ ತಮ್ಮ ವಿಚಾರ ವ್ಯಕ್ತಪಡಿಸಲು ಅವಕಾಶ ಕಲ್ಪಿಸಿಕೊಟ್ಟರೆ ಅದು ಬೌದ್ಧಿಕವಾಗಿ ವಿಧಾಯಕ ಕೆಲಸವಾಗಬಹುದು. ಕಾರಣ ಗ್ರಾಮಗಳ ನಾಗರಿಕರು ಇಂಥ ಸಾರ್ವಜನಿಕ ಅಭ್ಯಾಸ ಸಂಸ್ಥೆಗಳನ್ನು ಸ್ಥಾಪಿಸಲು ಮುಂದಾಗಬೇಕು. ಈ ಮೂಲಕ ಸಾರ್ವಜನಿಕ ಸಮಸ್ಯೆಗಳನ್ನು ಪಕ್ಷಾತೀತವಾಗಿ ಚರ್ಚಿಸಿ ಅವುಗಳ ಸಾರವನ್ನು ಜನಸಾಮಾನ್ಯರಿಗೆಲ್ಲಾ ನೀಡಿದರೆ ಭಾರತದ ಪ್ರಜಾಪ್ರಭುತ್ವ ಪದ್ಧತಿಗೆ ಭದ್ರ ಬುನಾದಿಯನ್ನು ಹಾಕಿದಂತಾಗುವದು.

ದೇಶದಲ್ಲಿರುವ ರಾಜಕೀಯ ಪಕ್ಷಗಳೂ ಸಹ ಜನಸಾಮಾನ್ಯರಿಗೆ ರಾಜಕೀಯ ಪ್ರಜ್ಞೆ ಮೂಡಿಸುವ ಕೆಲಸ ಮಾಡಬೇಕು,

ವಿಶೇಷವಾಗಿ ವಿರೋಧಿ ಪಕ್ಷಗಳು ಆಳುವ ಸರಕಾರದ ಲೋಪ ದೋಷಗಳನ್ನು ಎತ್ತಿತೋರಿಸಿ ಅವುಗಳನ್ನು ಸಾರ್ವಜನಿಕರಿಗೆ ಪರಿಚಯ ಮಾಡಿಕೊಡುವದಲ್ಲದೆ ತಮ್ಮ ಪಕ್ಷದ ಪ್ರತಿಕ್ರಿಯೆಗಳನ್ನು ಸಹ ತೋರಿಸುತ್ತಿರಬೇಕು. ಪ್ರಜಾಪ್ರಭುತ್ವದಲ್ಲಿ ಜನ ಜಾಗೃತಿ ಮಾಡುವದು ವಿಶೇಷವಾಗಿ ವಿರೋಧಿ ಪಕ್ಷಗಳ ಕರ್ತವ್ಯವಾಗಿದೆ. ಆಡಳಿತ ಕಲೆಯ ಪ್ರಥಮ ಪಾಠವನ್ನು ಪ್ರಜೆಗಳು ಸ್ಥಳೀಯ ರಾಜಕೀಯ ರಂಗದಲ್ಲಿಯೂ ಸುಲಭವಾಗಿ ಕಲಿತುಕೊಳ್ಳಬಹುದು.

ಸಮರ್ಥ ಅಭ್ಯರ್ಥಿ ಹಾಗೂ ಸಮರ್ಥ ಪಕ್ಷದ ಅಭ್ಯರ್ಥಿ ಇವರಿಬ್ಬರಲ್ಲಿ ಯಾರನ್ನು ಚುನಾಯಿಸಬೇಕು ಎಂಬುದೇ ನಮ್ಮ ಗ್ರಾಮೀಣ ಜನತೆಗೆ ಎದುರಾಗುವ ಇನ್ನೊಂದು ಸಮಸ್ಯೆ. ಮತ ದಾರರು ಇಲ್ಲಿ ಗಮನಿಸಲೇಬೇಕಾದ ಒಂದು ಅಂಶವೆಂದರೆ ಪ್ರಜಾಪ್ರಭುತ್ವ ದೇಶದಲ್ಲಿ ರಾಜಕೀಯ ಪಕ್ಷಗಳ ತಮ್ಮ 'ಚುನಾ ವಣಾ ಪ್ರಣಾಳಿಕೆ' (Election Manifesto) ಗಳನ್ನು ಹೊರಡಿಸಿರುತ್ತವೆ. ಅವುಗಳನ್ನು ಮತದಾರರು ವಿವರವಾಗಿ ಅಭ್ಯಾಸಮಾಡಿ ಯಾವ ಪಕ್ಷದ ಧ್ಯೇಯೋದ್ದೇಶಗಳನ್ನು ಫಲಕಾರಿ ಯಾಗಬಲ್ಲವು ಎಂಬುದನ್ನು ನಿರ್ಣಯಿಸಬೇಕು. ಸಮರ್ಥ ಪಕ್ಷದ ಧ್ಯೇಯೋದ್ದೇಶಗಳನ್ನು ಒಪ್ಪಿಕೊಂಡು ಮತದಾನ ಮಾಡಬೇಕು. ನಮ್ಮ ಮತದಾರ ಈ ಕೆಲಸವನ್ನು ಮಾಡುವದಿಲ್ಲ. ಸುಶಿಕ್ಷಿತರೂ ಸಹ ಅಷ್ಟೇ: ಕಾರಣ ಇಂಥಹ ಬೌದ್ಧಿಕ ಆಲಸ್ಯ ಕೊನೆಗೊಳ್ಳಬೇಕು.

ಮತದಾರರು ಯಾವದೇ ಪಕ್ಷದ ಧ್ಯೇಯೋದ್ದೇಶಗಳನ್ನು ಒಪ್ಪಿಕೊಳ್ಳಲಿ, ಆದರೆ ತಾವು ಆರಿಸುವ ಅಭ್ಯರ್ಥಿಗಳು ಅರ್ಹರೇ ಅಥವಾ ಅನರ್ಹರೇ? ಎಂಬುದನ್ನು ಕುರಿತು ಆಲೋಚಿಸುವದು

ಅನಿವಾರ್ಯ. ಪಕ್ಷದ ಅಭಿಮಾನಕ್ಕೆ ಬಿದ್ದು ಅಯೋಗ್ಯರನು ಆರಿಸಿದರೆ ಆ ನಾಯಕತ್ವಕ್ಕೆ ಎಡೆ ಮಾಡಿಕೊಟ್ಟಂತಾಗುತ್ತದೆ. ಸಮರ್ಥ ಜನ ಯಾವ ಪಕ್ಷಗಳಲ್ಲಿಯೇ ಇರಲಿ ಅವರಿಂದ ದೇಶದ್ಕ ಅಪಚಾರವಾಗಲಾರದು. ಇವರಿಂದ ಪಕ್ಷಗಳು ಶುದ್ಧೀಕರಣ ಗೊಳ್ಳುವದಲ್ಲದೇ ಆಡಳಿತದಲ್ಲಿ ಕಂಡುಬರುವ ಪಲವಾರು ದೋಷಗಳು ನಿರ್ಮೂಲಗೊಳ್ಳುತ್ತವೆ.

ಚುನಾಯಿತಗೊಂಡ ಪ್ರತಿನಿಧಿಗಳು ಮೊದಲು ತಾವು ಮಾಡ ಬೇಕಾದ ಕರ್ತವ್ಯಗಳ ಬಗ್ಗೆ ತೀವ್ರ ಪ್ರಜ್ಞೆ, ಹಾಗೂ ಆಸಕ್ತಿ ಹೊಂದಿದವರಾಗಿರಬೇಕು. ರಾಜ್ಯಗಳ ಶಾಸನಾ ಸಭಾ ಸದಸ್ಯರು ಪಂಚಾಯತಿಗಳ ಸಭೆಗೆ ಉಪಸ್ಥಿತರಿದ್ದು ಆ ಸದಸ್ಯರಿಗೆ ಎಲ್ಲ ರೀತಿ ಯಿಂದಲೂ ಮಾರ್ಗದರ್ಶನ ಮಾಡಬೇಕು.

ಇವೆಲ್ಲಾ ಅಪೇಕ್ಷಣೀಯವಾದ ವಿಚಾರಗಳಾದವು. ಸದ್ಯದ ಸಾಮಾಜಿಕ ಪರಿಸ್ಥಿತಿಯತ್ತ ಹೊರಳೋಣ; ಆದರೆ, ನಮ್ಮ ಬಹು ಸಂಖ್ಯಾತ ಜನ ಅಜ್ಞಾನ, ಅಂಧಕಾರದಲ್ಲಿ ಮುಳುಗಿದ್ದಾರೆ. ನಮ್ಮ ಸರಕಾರ ಈ ದಿಶೆಯಲ್ಲಿ ಶ್ರೀ ಸಾಮಾನ್ಯನನ್ನು ಸುಶಿಕ್ಷಿತ-ರನ್ನಾಗಿ ಮಾಡುವದಕ್ಕಾಗಿ ಉಚಿತ ಶಿಕ್ಷಣವನ್ನೂ, ವಯಸ್ಕರ ಶಿಕ್ಷಣವನ್ನು ನೀಡುತ್ತದೆ. ಅದರ ಸದುಪಯೋಗವನ್ನು ಮಾಡಿ ಕೊಂಡು ಎಲ್ಲರೂ ಸುಶಿಕ್ಷಿತರಾಗಿ ರಾಜಕೀಯ ಶಿಕ್ಷಣ ಪಡೆದು ಕೊಂಡು ನಮ್ಮ ದೇಶದ ಸಂವಿಧಾನವನ್ನು ನಮ್ಮ ಹಕ್ಕು ಹಾಗೂ ಕರ್ತವ್ಯಗಳನ್ನು ಅರಿತುಕೊಳ್ಳಬೇಕು, ಪ್ರಜ್ಞಾವಂತ ನಾಗರಿಕರಾಗಿ ಎಲ್ಲರೂ ವರ್ತಿಸಿದರೆ ಮಾತ್ರ ನಮ್ಮ ಪ್ರಜಾಪ್ರಭುತ್ವ ಬಾಳುತ್ತದೆ ಭದ್ರವಾಗುತ್ತದೆ.

ವಿಶಾಲ ಮನೋಭಾವನೆ :— ಸರಕಾರದ ಯಶಸ್ವಿಗೆ, ಜಾತಿ, ಧರ್ಮ, ಭಾಷೆ ಮುಂತಾದವುಗಳ ಬಗೆಗಿನ ಸಂಕುಚಿತ ದುರಭಿಮಾನ ಅಳಿದುಹೋಗಿ ಜನರಲ್ಲಿ ನಾವೆಲ್ಲಾ ಒಂದೇ ಎಂಬ ಭಾವನೆ ಬೆಳೆದು ಬರಬೇಕಾಗುತ್ತದೆ. ಇಂತಹ "ಮಾನಸಿಕ ಐಕ್ಯ" (Emotional Integration) ಬೆಳೆದು ಬಂದರೆ ಮಾತ್ರ ಒಂದು ರಾಜ್ಯ ರಾಷ್ಟ್ರವಾಗಿ ರೂಪಾಂತರಹೊಂದಿ ಯಾವ ರೀತಿಯ ಸರಕಾರ ಅಧಿಕಾರದಲ್ಲಿದ್ದರೂ ಅದು ಯಶಸ್ವಿಯಾಗುತ್ತದೆ.

ನಮ್ಮ ಜನ ಇಂತಹ ಐಕ್ಯ ಭಾವನೆಯನ್ನು ಭಾರತ-ಚೀನಾ ಯುದ್ಧ (೧೯೬೨) ಹಾಗೂ ಭಾರತ-ಪಾಕಿಸ್ತಾನಗಳ ಯುದ್ಧಗಳ ಕಾಲಕ್ಕೆ (೧೯೬೫-೧೯೭೧) ವ್ಯಕ್ತಪಡಿಸಿದ್ದಾರೆ ಎಂಬ ಅಂಶವನ್ನು ಅಲಕ್ಷಿಸದಿದ್ದರೂ ನಿತ್ಯಜೀವನದಲ್ಲಿ ಇದರ ಕೊರತೆಯನ್ನು ನಾವು ಕಾಣುತ್ತಿದ್ದೇವೆ. ನಮ್ಮ ಜನತೆಯ ರಾಷ್ಟ್ರೀಯ ಭಾವನೆ ಹಾಗೂ ನೈತಿಕ ಮಟ್ಟ ಕುಸಿಯುತೊಡಗಿದ್ದು. ಇದೊಂದು ದೊಡ್ಡ ಅಶುಭ ಸಂಕೇತವಾಗಿದೆ. ಸಮಾಜ-ಕಲ್ಯಾಣದ ಮನೋಭಾವನೆ ಕಡಿಮೆಯಾಗುತ್ತಿದೆ. ಜನರಲ್ಲಿ ಅಜಾಗರೂಕತೆ ಬೆಳೆಯುತ್ತಿದೆ.

ನಮ್ಮ ಜನ ಸಂಪ್ರದಾಯ ಬದ್ಧರು ರಾಜಕೀಯ ವಿಷಯದಲ್ಲಾಗಲಿ ಹಾಗೂ ಇನ್ನಿತರ ವಿಷಯಗಳಲ್ಲಾಗಲಿ ಪ್ರಗತಿಪರ ವಿಚಾರಗಳ ಕೊರತೆ ಬಹಳ. ನಮ್ಮ "ಪಂಚಾಯತಿ ರಾಜ್ಯ" ವ್ಯವಸ್ಥೆ ಸಂಸದೀಯ ಪ್ರಜಾಸತ್ತಾತ್ಮಕ ತತ್ವಗಳ ಆಧಾರದ ಮೇಲೆ ಕಟ್ಟಲ್ಪಟ್ಟಿರುವದರಿಂದ ಜಾತಿ ಹಾಗೂ ಪಂಗಡಗಳ ಮೇಲಾಟದ ಪರಿಣಾಮವಾಗಿ ಪ್ರಗತಿ ಅಷ್ಟೊಂದು ತೀವ್ರಗತಿಯಿಂದ ಸಾಗಲಾರದು. ನಮ್ಮ ಜನರಲ್ಲಿ ರಕ್ತಗತವಾಗಿ ಬೆಳೆದು ಬಂದ ದುರ್ಗುಣವೆಂದರೆ ಜಾತೀಯತೆ. ಅವರಿಗೆ ಯಾವದೇ ಒಂದು ಅಂಶವನ್ನು ಕೊಡಿರಿ.

ಅವರು ಅದನ್ನು ಜಾತೀಯ ದೃಷ್ಟಿಯಿಂದಲೇ ನೋಡುತ್ತಾರೆ ಇದರ ಪರಿಣಾಮ ನಮ್ಮ ಚುನಾವಣೆಗಳಲ್ಲಿ ಕಂಡುಬರುತ್ತದೆ ನಮ್ಮ ಜನ ಈ ಸಂಕುಚಿತ ಭಾವನೆಯಿಂದ ಮುಕ್ತರಾಗಬೇಕು ಆದಷ್ಟು ತೀವ್ರ ಮುಕ್ತರಾಗಬೇಕು. ಮತದಾನದ ಕಾಲಕ್ಕೆ ಜಾತಿ, ಕುಲಗೋತ್ರಗಳನ್ನು ಅಲಕ್ಷಿಸಿ ಯೋಗ್ಯ ಅಭ್ಯರ್ಥಿಗೆ ಮತದಾನ. ಮಾಡಲು ಕಲಿಯಬೇಕು.

ನಮ್ಮ ಪ್ರತಿನಿಧಿಗಳೂ ಸಹ ಈ ದುರ್ಗುಣದಿಂದ ಮುಕ್ತರಾಗಿಲ್ಲ. ಅವರು ತಮ್ಮ ಅಧಿಕಾರದ ವ್ಯಾಮೋಹಕ್ಕೆ ಒಳಗಾಗಿದ್ದಾರೆ. ಅಧಿಕಾರ ಇರುವದು ಜನರನ್ನು ಆಡಳಿತಕ್ಕಾಗಿ ಸುಖೋಪಭೋಗಗಳನ್ನು ಅನುಭವಿಸುವದಕ್ಕಾಗಿ ಎಂದು ಭ್ರಮಿಸಿ ಕೊಂಡಿದ್ದಾರೆ. ಅವರಿಗೆ (Administration) 'ಆಡಳಿತ ಎಂಬ ಶಬ್ದದ ಅರ್ಥವೇ ತಿಳಿದಿಲ್ಲ ಎನ್ನುವಂತಿದೆ. Administration ಎಂಬ ಫ್ರೆಂಚ್ ಭಾಷೆಯ Adminisatire ಎಂಬ ಶಬ್ದದಿಂದ ಉಗಮಿಸದೆ. ಆದರರ್ಥ 'ಕಾಳಜೀವಹಿಸು' 'ಗಮನಹರಿಸು' ಎಂದಾಗುತ್ತದೆ. ತಾತ್ಪರ್ಯವೆಂದರೆ ಆಡಳಿತ ನಡೆಸುವದು ಎಂದರೆ ಜನತೆಯ ಬಗ್ಗೆ ಕಾಳಜೀ ವಹಿಸುವದು ಎಂದಾಗುತ್ತದೆ. ನಮ್ಮ ಪ್ರತಿನಿಧಿಗಳು ಸಹ ಈ ಭಾವನೆಯನ್ನು ತೀವ್ರವಾಗಿ ಮೈಗೂಡಿಸಿಕೊಳ್ಳುವ ಅನಿವಾರ್ಯತೆಯನ್ನು ಅರಿಯಬೇಕಾಗಿದೆ. ಸ್ವಾರ್ಥಕ್ಕಾಗಿ ಅಧಿಕಾರ ಎಂಬ ಭಾವನೆ ದೂರಾಗಬೇಕು. ಇದೇ ನಮ್ಮ ದೇಶದ ದೊಡ್ಡ ದುರಂತವಾಗಿದೆ.

'ಭಾರತದಲ್ಲಿ ಭಾರತೀಯನ್ನೇ ಇಲ್ಲ' ಎಂಬ ವಿಪರ್ಯಾಸದ ನುಡಿ ಆಗಾಗ ಕೇಳಿ ಬರುತ್ತಿದೆ. ಇದರ ಮತಿತಾರ್ಥ

ಸುಸ್ಪಷ್ಟವಾಗಿದೆ. ನಮ್ಮ ಜನರಲ್ಲಿ ರಾಷ್ಟ್ರೀಯ ಭಾವನೆ ಕಡಿಮೆಯಾಗುತ್ತಿದೆ. ನಮ್ಮ ಜನ ವಿದೇಶಗಳಿಗೆ ಹೋದಾಗ ಈಗ, ದೇಶದಲ್ಲಿ ನೋಡಿದರೆ ದಿಕ್ಕಿಗೊಂದೊಂದು ಸಮಸ್ಯೆ : ಪಂಜಾಬದಲ್ಲಿ ಖಲಿಸ್ತಾನ ಚಳುವಳಿ. ಪಶ್ಚಿಮ ಬಂಗಾಲದಲ್ಲಿ ಗೂರ್ಖಾಲ್ಯಾಂಡಗಾಗಿ ಚಳುವಳಿ. ರಾಜ್ಯ ನಡುವಿನ ನೆರೆಹೊರೆಯ ರಾಜ್ಯಗಳ ಅನೇಕ ಸಮಸ್ಯೆಗಳು ನೆನೆಗುದಿಗೆ ಬಿದ್ದಿವೆ. ಬೇರೆ ಸಾಕ್ಷಿಗಳೇನು ಬೇಕು ? ಇವೆಲ್ಲ ನಮ್ಮಲ್ಲಿ ರಾಷ್ಟ್ರೀಯ ಭಾವನೆ ಕಡಿಮೆಯಾಗುತ್ತಿರುವದಕ್ಕೆ ಸಾಕ್ಷಿಗಳೇನು ಬೇಕು ?

ಈ ಸಂದರ್ಭದಲ್ಲಿ ಎರಡು ದೃಷ್ಟಾಂತಗಳನ್ನು ನೆನೆದರೆ ತಪ್ಪಾಗಲಿಕ್ಕಿಲ್ಲ.

ತಾವು ಕರ್ನಾಟಕದವರು, ಕೇರಳದವರು, ಬಂಗಾಲದವರು ಮಹಾರಾಷ್ಟ್ರ ಎಂದು ಕರೆದುಕೊಳ್ಳುತ್ತಾರೆ : ವಿನಹ. ಭಾರತೀಯರೆಂದು ಅಭಿಮಾನದಿಂದ ಹೇಳುವದಿಲ್ಲ.

ಒಮ್ಮೆ ಸ್ವಾಮಿ ವಿವೇಕಾನಂದರು ಜಪಾನದಲ್ಲಿ ರೈಲಿನಲ್ಲಿ ಪ್ರಯಾಣ ಮಾಡುತ್ತಿದ್ದರಂತೆ. ಅವರು ಎರಡು-ಮೂರು ರೈಲು ನಿಲ್ದಾಣಗಳಲ್ಲಿ ಇಳಿದು ಬಾಳೇಹಣ್ಣುಗಳನ್ನು ಕೊಳ್ಳಲು ವಿಚಾರಿಸಿ, ದೊರಕುವದಿಲ್ಲ ಎಂಬ ಉತ್ತರ ಪಡೆದು ನಿರಾಶರಾದಂತೆ ಮುಂದಿನ ರೈಲು ನಿಲ್ದಾಣ ಬಂದ ಕೂಡಲೇ ಅವರ ಬದಿಗೆ ಕುಳಿತಿದ್ದ ಜಪಾನೀಯ ಯುವಕನೊಬ್ಬ ಇಳಿದು ಹೋಗಿ ತನ್ನ ಹಣ ಕೊಟ್ಟು ಬಾಳೆಹಣ್ಣುಗಳನ್ನು ತಂದು ಸ್ವಾಮಿ ವಿವೇಕಾನಂದರಿಗೆ ಕೊಟ್ಟನಂತೆ. ವಿವೇಕಾನಂದರು ಅವನಿಗೆ ಹಣ

ಕೊಡಲು ಹೋದಾಗ ಅವನು ಅದನ್ನು ನಿರಾಕರಿಸಿ ಹೇಳಿದ ಮಾತು ಹೃದಯ ಸ್ಪರ್ಶಿಯಾಗಿದೆ: ನಿಮ್ಮ ದೇಶಕ್ಕೆ (ಭಾರತಕ್ಕೆ) ಹೋದ ಮೇಲೆ ಜಪಾನದಲ್ಲಿ ಬಾಳೆ ಹಣ್ಣುಗಳು ಸಿಗಲಿಲ್ಲವೆಂದು ಹೇಳಬೇಡಿರಿ, ಅದೇ ನೀವು ಕೊಡುವ ಹಣವೆಂದು ತಿಳಿದು ಕೊಳ್ಳುತ್ತೇನೆ" ಎಂದನಂತೆ ಹೇಗಿದೆ ಆ ಯುವಕನ ರಾಷ್ಟ್ರಾಭಿಮಾನ ಅದ್ದರಿಂದಲೇ ಅಂತಹ ಸಣ್ಣ ದೇಶ ಇಂದು ಪ್ರಪಂಚದ ಬಲಾಢ್ಯ ಅಮೇರಿಕಾ ದೇಶಕ್ಕೆ ಸರಿಸಮಾನವಾಗಿ ಬೆಳೆದು ನಿಂತಿದೆ.

ಎರಡನೇಯ ದೃಷ್ಟಾಂತ ಜಗತ್ಪ್ರಸಿದ್ಧ ಚಕ್ರವರ್ತಿ ನೆಪೋಲಿಯನ್ ಬೋನಾಪಾರ್ಟಿಗೆ ಸಂಬಂಧಿಸಿದುದು. ಒಮ್ಮೆ ಫ್ರಾನ್ಸ ದೇಶಕ್ಕೆ, ಅವರ ವೈರಿ ದೇಶದ ಬೇಹುಗಾರನೊಬ್ಬ ನುಸುಳಿ ಕೊಂಡಾಗ, ಫ್ರಾನ್ಸ ದೇಶದವರ ಕೈಗೆ ಸಿಕ್ಕುಬಿದ್ದನಂತೆ. ಅವನನ್ನು ನೇಪೋಲಿಯನ್ನನ ಬಳಿಗೆ ಒಯ್ದಾಗ ಅವನಿಗೆ ಅಜೀವ ಕಾರಾಗ್ರುಹ ಶಿಕ್ಷೆ ವಿಧಿಸಲಾಯಿತು. ಆಗ ಆ ಬೇಹುಗಾರ ತನ್ನನ್ನು ಹಾಗೆ ಮಾಡದೇ ಬಿಟ್ಟು ಬಿಡಬೇಕೆಂದೂ, ತಾನು ತನ್ನ ದೇಶದ ಸ್ವಾರ್ಥ ಕೇಂದ್ರಿತ ಗುಪ್ತ ಮಾಹಿತಿಗಳನ್ನೆಲ್ಲಾ ತಿಳಿಸುವದಾಗಿಯೂ ಆತ ಹೇಳಿದಾಗ ನೆಪೋಲಿಯನ್ನನ ರಕ್ತ ಕುದಿಯಿತಂತೆ. "ಇಂಥ ನೀಚನಿಂದ ಸ್ವದೇಶಕ್ಕಾಗಲಿ ಪರದೇಶಕ್ಕಾಗಲಿ ಉಪಯೋಗವಿಲ್ಲ. ಕಾರಣ ಇವನನ್ನು ಈಗಿಂದೀಗಲೇ ಗಲ್ಲಿಗೇರಿಸಬೇಕೆಂದು ಆಜ್ಞೆ ಇತ್ತನಂತೆ.

ಜಪಾನಿನ ಯುವಕನಂತಹ ದೇಶಾಭಿಮಾನ ನಮ್ಮಲ್ಲಿ ಎಷ್ಟು ಜನರಲ್ಲಿದೆ ? ಮಾತೃಭೂಮಿಯ ಹಿರಿಮೆಯನ್ನು ಹೀಗೆ

ಕೊಂಡಾಡಿದ್ದಾರೆ. "ಜನನೀ ಜನ್ಮ ಭೂಮಿಶ್ಚ ಸ್ವರ್ಗಾದಪಿ ಗರಿಯಸೀ" ನಮಗೆ ಜನ್ಮ ಕೊಟ್ಟ ತಾಯಿ ಹಾಗೂ ಜನ್ಮಭೂಮಿ ಸ್ವರ್ಗಕ್ಕಿಂತಲೂ ಮಿಗಿಲಾದವುಗಳು, ನಮ್ಮ ಜನತೆ ಇಂಥಹ ವಿಶಾಲ ಭಾವನೆಯನ್ನು ಬೆಳೆಸಿಕೊಳ್ಳಬೇಕು.

೩) ಸಮರ್ಥ ಧುರೀಣತ್ವ :

ಈಗ ನಮ್ಮ ದೇಶಕ್ಕೆ ಎದುರಾಗಿರುವ ಮುಖ್ಯ ಸಮಸ್ಯೆ ಎಂದರೆ, ಸಮರ್ಥ ನಾಯಕತ್ವದ ಕೊರತೆ. 'ಕಲ್ಯಾಣ ರಾಷ್ಟ್ರ' ದ ಗುರಿ ಸಾಧನೆಗಾಗಿ ಇಂಥಹ ನಾಯಕತ್ವ ಅತ್ಯವಶ್ಯಕವಾಗಿದೆ. ಇಂಥಹ ಸಮರ್ಥ ನಾಯಕರು ಬೆಳೆದು ಬರಲೆಂದೇ 'ಪಂಚಾಯತಿ ರಾಜ್ಯ' ವ್ಯವಸ್ಥೆಯನ್ನು ಜಾರಿಗೊಳಿಸಲಾಗಿದೆ. 'ಯೋಗ್ಯ ವ್ಯಕ್ತಿಯನ್ನು ನಾಯಕ ಪಟ್ಟಕ್ಕೆ, ಆಗ ನಿಮ್ಮೆಲ್ಲ ಸಮಸ್ಯೆಗಳು ತಾವೇ ತಾವಾಗಿ ಪರಿಹಾರಗೊಳ್ಳುತ್ತವೆ' ಎಂಬ ಉಕ್ತಿಯೊಂದಿದೆ (Get the right man in the leadership job and all your problems will be solved). ತತ್ವಜ್ಞಾನಿಗಳು ರಾಜರಾಗುವವರೆಗೆ ಅಥವಾ ರಾಜಪದವಿಯಲ್ಲಿರುವವರು ತತ್ವಜ್ಞಾನಿಗಳಾಗುವವರೆಗೆ ಮಾತ್ರ ರಾಜ್ಯದಲ್ಲಿರುವ ಅಶಾಂತಿ ತೊಲಗಿ ಸುಖ ಶಾಂತಿ ನೆಲೆಸಲಾರದು. ಯಾಕೆಂದರೆ, ಅವರು ತತ್ವಜ್ಞಾನಿಗಳಾಗಿರುವದರಿಂದಲೇ ವಿವೇಕವಂತರಾಗಿರುತ್ತಾರೆ" ಎನ್ನುವ ಪ್ಲೇಟೋರವರ ಮಾತನ್ನು ನೆನಪಿಸಿಕೊಳ್ಳುವದು ಸೂಕ್ತವೆನಿಸುತ್ತದೆ (Until the philosophers are the kings, Kings and princes of this world have a spirit, power of philosophy, political greatness

and wisdom met in one the cities will never rest from the evils). ನಮ್ಮಲ್ಲಿಯ ಎಷ್ಟು ಜನ ಧುರೀಣರು ಈ ಗುಣಗಳನ್ನು ಹೊಂದಿದವರಾಗಿದ್ದಾರೆ ಎಂಬುದು ದೊಡ್ಡ ಪ್ರಶ್ನೆಯಾಗಿದೆ. ನಮ್ಮ ಗ್ರಾಮೀಣ ಧುರೀಣತ್ವ ಸತ್ವಶಾಲಿಯಾಗಿಲ್ಲ. ಶತಶತಮಾನಗಳ ದಾಸ್ಯತ್ವ ನಮ್ಮಲ್ಲಿ ಈ ಗುಣವನ್ನು ಅಳಿಸಿ ಹಾಕಿದೆ. ಪ್ರಾಮಾಣಿಕ, ನಿಸ್ವಾರ್ಥ, ತ್ಯಾಗಶೀಲ ಧುರೀಣರಿಂದಲೇ ಮಾತ್ರ ಪ್ರಜಾಪ್ರಭುತ್ವ ಯಶಸ್ವಿಗೊಳ್ಳುತ್ತದೆ. ಸ್ವಾತಂತ್ರ್ಯಪೂರ್ವದಲ್ಲಿ ಹಾಗೂ ಸ್ವಾತಂತ್ರ್ಯ ದೊರಕಿದ ಪ್ರಾರಂಭದ ಕೆಲ ವರ್ಷಗಳಲ್ಲಿ ನಮ್ಮಲ್ಲಿ ತ್ಯಾಗಶೀಲರಾದ (ತ್ಯಾಗಮನೋಬುದ್ಧಿಯ) ಧುರೀಣರಿದ್ದರು. ಈಗ ಪರಿಸ್ಥಿತಿ ತಿರುವು ಮುರುವಾಗಿದೆ. ಈ ದೋಷವನ್ನು ನಿವಾರಿಸುವ ಶಕ್ತಿ ನಮ್ಮೆಲ್ಲರ ಕೈಯಲ್ಲಿದೆ. ಗುಣವಂತ ಧುರೀಣರಿದ್ದರೆ ಮಾತ್ರ ಪ್ರಜಾಪ್ರಭುತ್ವ ಯಶಸ್ವಿಯಾಗಿ ಕಾರ್ಯಮಾಡಲು ಸಾಧ್ಯವಾಗುತ್ತದೆ. ಇದನ್ನೇ ಪ್ರೊ. ಬಾರಟಲ್ಮಿ ಎಂಬವರ ಮಾತಿನಲ್ಲಿ ಹೇಳುವುದಾದರೆ "Democracy can work successfully only if it is directed by the wisest and the most intelligent and the best"

"ಜನ ಸೇವೆಯೇ ಜನಾರ್ಧನನ ಸೇವೆ" ಎಂದು ನಂಬಿ ಆಚರಣೆ ಮಾಡುವ ಧುರೀಣರು ನಮಗೆ ಬೇಕು. ಜನಾಭಿಪ್ರಾಯದ ನಾಡಿಯ ಮಿಡಿತವನ್ನು ಹಿಡಿದು, ಧುರೀಣರು ಕೆಲಸ ಮಾಡ

ಬೇಕು. ಇದಕ್ಕೆ ವಿಪರೀತ ಅರ್ಥ ಕಲ್ಪಿಸಿ ಡೋಲಾಯಮಾನ ಪ್ರಜಾಭಿಪ್ರಾಯಕ್ಕೆ ಕೇವಲ ಹೊಂದಿಕೊಂಡು ಹೋಗುವದು ನಾಯಕತ್ವವೇ ಅಲ್ಲ. ನಾಯಕತ್ವದ ಲಕ್ಷಣಗಳೆಂದರೆ :- ನೂತನ ಗುರಿಗಳನ್ನು ಮುಂದಿಡುವ, ವಿನೂತನ ಮತ್ತು ಉದಾತ್ತ ನಿರೀಕ್ಷೆಗಳನ್ನು ಗರಿಗೆದರಿಸುವ ಹಾಗೂ ನೈತಿಕ ಮತ್ತು ಆಧ್ಯಾತ್ಮಿಕ ಆಕಾಂಕ್ಷೆಗಳನ್ನು ಮೈಗೂಡಿಸಿಕೊಂಡಿರುವ ವ್ಯಕ್ತಿತ್ವ. ಮುಖ್ಯವಾಗಿ ನಾಯಕನು ತನ್ನ ಅನುಯಾಯಿಗಳಿಗೆ ನೈತಿಕದಾರಿ ತೋರಬೇಕು. ಕಾರಣವೆಂದರೆ ಅನುಯಾಯಿಗಳು ಅನುಕರಣೆ ಮಾಡುವದು ನಾಯಕನ ನುಡಿಯನ್ನಲ್ಲ ನಡತೆಯನ್ನು. ಆದ್ದರಿಂದ ನಾಯಕತ್ವ ಶ್ರೇಷ್ಠ ಗುಣಮಟ್ಟದ್ದಾಗಿರುವದು ರಾಜಕೀಯ ಆರೋಗ್ಯಕ್ಕೆ ಕ್ಷೇಮಕರ. ನಮ್ಮ ರಾಜಕಾರಣಿಗಳು ಮುತ್ಸದ್ದಿಗಳಾಗಿರಬೇಕು; ಅವರು ಕೇವಲ ರಾಜಕಾರಣಿಗಳ ಮಟ್ಟದಲ್ಲಿಯೇ ಉಳಿಯಬಾರದು. (ಮುತ್ಸದ್ದಿ) ರಾಜಕಾರಣಿಯಾದವನು ತನ್ನ ತಲೆಮಾರಿನವರ ಬಗ್ಗೆ ಮಾತ್ರ ಸೀಮಿತ ಯೋಚನೆ ಮಾಡಿದರೆ, ಸ್ಟೇಟ್ಸಮನ್‌ರಾದವರು ಮುಂದಿನ ಪೀಳಿಗೆಗಳ ಬಗೆಗೂ ಯೋಚನೆ ಮಾಡಿ ಯೋಜನೆಗಳನ್ನು ಹಾಕುತ್ತಿರುತ್ತಾರೆ. ಇಂಥಹ ಮುತ್ಸದ್ದಿ ಮಟ್ಟದ ಧುರೀಣತ್ವ ನಮಗಿಂದು ಬೇಕಾಗಿದೆ. ಈಗ ರಾಜಕೀಯ ಒಂದು ವೃತ್ತಿಯೆಂಬ (ಕ್ಯಾರಿಯರ್) ಸ್ವರೂಪ ಹೊಂದಿದೆ.

ಸಾರ್ವಜನಿಕ ಆಡಳಿತ ತಜ್ಞರಾದ ಮಿಲಿಟ್ ಬರ್ನಾರ್ಡ್‌ಸ, ಕ್ಲೀವ್‌ಲ್ಯಾಂಡ್, ಟೆರ್ರಿ ಆಪ್ಲಬಿ ಮುಂತಾದವರೆಲ್ಲ ಸಮರ್ಥ ಧುರೀಣರಲ್ಲಿರಬೇಕಾದ ಗುಣಗಳನ್ನು ಸುದೀರ್ಘವಾಗಿ ವಿವರಿ

ಸಿದ್ಧಾರೆ. ಅದನ್ನೇ ಸಾರಾಂಶರೂಪದಲ್ಲಿ ಹೇಳುವದಾದರೆ- ರಾಜಕೀಯ ಧುರೀಣ ದೂರದೃಷ್ಟಿ. ದೃಢನಿರ್ಧಾರ, ಸರಿಯಾದ ನಿರ್ಣಯ, ಪ್ರಗತಿಪರ ನೀಡಿ ಸ್ಫೂರ್ತಿಯ ನೆಲೆ, ಒಳ್ಳೆಯ ಸಂಘಟನೆ ಹಾಗೂ ಸಾರ್ವಜನಿಕರೊಂದಿಗೆ ಸಂಪರ್ಕವನ್ನಿಟ್ಟು ಕೊಂಡವನಾಗಿರಬೇಕು.

ಇಂತಹ ಧುರೀಣರು ಒಮ್ಮೆಂದೊಮ್ಮೆಲೇ ಅವತರಿಸಲಾರರು. ಇದಕ್ಕಾಗಿ ಬೀಜ ಊರಿ ಕೃಷಿ ಮಾಡಬೇಕಾಗುತ್ತದೆ. ನಮ್ಮ ಧುರೀಣರಿಗೆ ಸಂಘಟನೆಯ ತಾತ್ವಿಕ ಹಾಗೂ ಪ್ರಾಯೋಗಿಕ ಶಿಕ್ಷಣವನ್ನೀಡುವವರು ಅವಶ್ಯ. ಸಮರ್ಥ ನಾಯಕರಿಂದ ಆಡ ಳಿತದಲ್ಲಿ ಜೀವಕಳೆ ತುಂಬಿ ಬರುತ್ತದೆ. ಒಟ್ಟಿನಲ್ಲಿ ನಮ್ಮ ನಾಯಕ ರಾದವರು ಪ್ರಾಮಾಣಿಕರೂ, ಸಚ್ಚಾರಿತ್ರ್ಯವಂತರೂ, ದೇಶಭಕ್ತಿ ಹಾಗೂ ಸ್ವಾರ್ಥ ತ್ಯಾಗ ಭಾವನೆಗಳಿಂದ ಕೂಡಿಕೊಂಡವರೂ ಆಗಿರಬೇಕಲ್ಲದೆ, ಸಾರ್ವಜನಿಕ ಸೇವೆಯೇ ಅವರ ಗುರಿಯಾಗಿರ ಬೇಕು. ಇಂತಹ ನಾಯಕರನ್ನೇ ಚುನಾಯಿಸುವದು ನಮ್ಮೆಲ್ಲರ ಕರ್ತವ್ಯ.

ನಮ್ಮ ಇಂದಿನ ವಿಕೇಂದ್ರಿಕೃತ ಆಡಳಿತ ವ್ಯವಸ್ಥೆಯಲ್ಲಿ ಯಶಸ್ವಿ ಆಡಳಿತ, ಅಧಿಕಾರಿ ಹಾಗೂ ಅಧಿಕಾರೇತರರ ಸಂಬಂಧವನ್ನು ಅವಲಂಬಿಸಿದೆ. ಅಧಿಕಾರೇತರರು ಧೋರಣೆಗಳನ್ನು ರೂಪಿಸ ಬೇಕು, ಅವುಗಳನ್ನು ಕಾರ್ಯರೂಪಕ್ಕೆ ತರುವದು ಅಧಿಕಾರಿಗಳ ಕಾರ್ಯ. ಆದರೆ ದಿನ ನಿತ್ಯದ ಆಡಳಿತವನ್ನು ಅವಲೋಕಿಸಿದಾಗ ಕಂಡು ಬರುವ ಸತ್ಯಾಂಶವೆಂದರೆ ಅಧಿಕಾರೇತರರು ದಿನನಿತ್ಯದ ಆಡಳಿತದಲ್ಲಿ ಅತಿಯಾಗಿ ಹಸ್ತಕ್ಷೇಪ ಮಾಡಿ, ಕಚೇರಿ ಸಿಬ್ಬಂದಿಯಲ್ಲಿ

ಗುಂಪುಗಳಾಗಿ ಅಶಿಸ್ತಿಗೆ ಕಾರಣವಾಗುವದುಂಟು. ಇದೇ ರೀತಿಯು ಅನಾಹುತಗಳು ಅಧಿಕಾರಿಯ ಅಸಹಕಾರದಿಂದಲೂ ಆಗುವದುಂಟು ಕೆಲವೊಂದು ಸಾರೆ ಅಧಿಕಾರಿಗಳು ತಮ್ಮ ಕೆಲಸದ ಬಗ್ಗೆ ನಿರ್ಲಿಪ್ತ ರಾಗುವದುಂಟು. ಅಧಿಕಾರೇತರರಿಗೆ ಕ್ರಿಯಾತ್ಮಕ ಸಲಹೆಗಳನ್ನು ಕೊಡುವದಿಲ್ಲ, ಅಥವಾ ಅವರು ತಪ್ಪು ಹಾದಿ ಹಿಡಿದಾಗ ಎಚ್ಚರಿ ಸುವದೂ ಇಲ್ಲ. ಸುಮ್ಮನೆ ಕೈಕಟ್ಟಿ ಕುಳಿತು ಬಿಡುತ್ತಾರೆ. ಅಧಿಕಾರಿ ಗಳ ಈ ತೆರನಾದ ವರ್ತನೆ ಶೈಶವಾವಸ್ಥೆಯಲ್ಲಿರುವ ನಮ್ಮ ಪಂಚಾಯತಿ ರಾಜ್ಯ ವ್ಯವಸ್ಥೆಗೆ ಕುಠಾರಪ್ರಾಯವೆನಿಸಬಹುದು.

ಅಧಿಕಾರಿ ಹಾಗೂ ಅಧಿಕಾರೇತರರ ಹೊಂದಾಣಿಕೆಯಾದರೆ ಮಾತ್ರ ನಮ್ಮ ಈ 'ಪಂಚಾಯತಿ ರಾಜ್ಯ' ವ್ಯವಸ್ಥೆ ಯಶಸ್ವಿಯಾಗಿ ಕಾರ್ಯ ಮಾಡುತ್ತದೆ. ಇಬ್ಬರೂ ಪರಸ್ಪರ ಪೂರಕವಾಗಿರಬೇಕಾ ಗುತ್ತದೆ.

೪ ಸೂಚನೆ : ಕಾಯಿ ಹಣ್ಣಾಗುವದಕ್ಕೂ ಕಾಲ ಬೇಕು ಎಂದು ಹೇಳತ್ತಾರೆ. ನಾವು ಸ್ವತಂತ್ರರಾಗಿ, ಪ್ರಜಾಪ್ರಭುತ್ವ ಸರಕಾರವನ್ನು ಸ್ಥಾಪಿಸಿಕೊಂಡು ಇನ್ನೂ ನಾಲ್ಕು ದಶಕಗಳು ಕಳೆದಿಲ್ಲ. ನಾಲ್ಕು ದಶಕಗಳ ಕಾಲ ವ್ಯಕ್ತಿ ಜೀವನಮಾನದಿಂದ ದೀರ್ಘವೆನಿಸಿ ದರೂ, ರಾಷ್ಟ್ರ ಜೀವನಮಾನದಿಂದ ದೀರ್ಘ ಅವಧಿಯಲ್ಲ. ನಾವು ನಮ್ಮ ಪ್ರಜಾಪ್ರಭುತ್ವ ಸರಕಾರವನ್ನು ಒಮ್ಮೆಲೇ ಅಮೇರಿಕಾ ಸಂಯುಕ್ತ ಸಂಸ್ಥಾನದೊಂದಿಗೆ ಅಥವಾ ಇಂಗ್ಲಂಡ್ ದೇಶದೊಂದಿಗೆ ಹೋಲಿಸಿಕೊಂಡು ನಿರಾಶರಾಗಬೇಕಾಗಿಲ್ಲ. ಆ ದೇಶಗಳು ಈಗಿನ ಸ್ಥಿತಿಗೆ ಬರಬೇಕಾದರೆ ಎರಡು ಶತಮಾನಗಳನ್ನು, ಸಾವಿರ ವರ್ಷ ಗಳನ್ನೇ ಕಳೆದಿವೆ.

ನಮ್ಮ ಪ್ರಜಾಪ್ರಭುತ್ವ ಯಶಸ್ವಿಯಾಗಬೇಕಾದರೆ ನಮ್ಮ ಜನತೆಯಲ್ಲಿ ಸಹನಾಗುಣ ರಕ್ತಗತವಾಗಬೇಕು. ಬಹುಸಂಖ್ಯಾಕರರು ಅಲ್ಪಸಂಖ್ಯಾಕರರ ಸಲಹೆಗಳಿಗೆ ಮನ್ನಣೆ ಕೊಟ್ಟು ಅವರನ್ನು ವಿಶ್ವಾಸದಿಂದ ನಡೆಸಿಕೊಂಡು ಹೋಗಬೇಕು. ಅವರ ಸಮಂಜಸ ವಾದ ಬೇಡಿಕೆಗಳನ್ನು ಈಡೇರಿಸಲು ಪ್ರಯತ್ನಿಸಬೇಕು. ಅವರಿಗೆ ಅವಮಾನವಾಗದಂತೆ ನೋಡಿಕೊಳ್ಳಬೇಕು. ಅವರ ಹಕ್ಕುಗಳನ್ನು ಹತ್ತಿಕ್ಕಲು ಪ್ರಯತ್ನಿಸಬಾರದು. ಒಟ್ಟಿನಲ್ಲಿ ಜನರಲ್ಲಿ ಹೊಂದಿ ಕೊಂಡು ಹೋಗುವ ಶಕ್ತಿ ಬೇಕು, ಸೌಹಾರ್ದತೆಯನ್ನು ಕಾಯ್ದು ಕೊಳ್ಳುವ ಮನೋಭಾವ ಬೇಕು.

ಪ್ರಜಾಪ್ರಭುತ್ವದಲ್ಲಿ ದೇಶದ ಪ್ರಗತಿ ನಿಧಾನವಾಗಿ ಆಗುತ್ತದೆ. ನಾವು ಬೆವರು ಸುರಿಸಿ ದುಡಿದು, ಅನೇಕ ಸಂಕಷ್ಟಗಳನ್ನು ಸಹಿಸಿ, ಅನೇಕ ರೀತಿಯಿಂದ ತ್ಯಾಗ ಮಾಡಿದರೂ ಕೆಲವು ಯೋಜನೆಗಳ ಫಲವನ್ನು ನಾವು ನಮ್ಮ ಜನ್ಮದಲ್ಲಿ ಅನುಭವಿಸದೇ ಹೋಗ ಬಹುದು. ಆದರೆ ಮುಂದಿನ ಪೀಳಿಗೆಯವರು ಅದರ ಫಲ ಉಣ್ಣು ತ್ತಾರೆ ಎಂಬುದನ್ನು ಮರೆಯಬಾರದು. ನಮ್ಮ ಜನತೆ ಉತ್ತಮ ಭವಿಷ್ಯಕ್ಕಾಗಿ ಇಂದಿನ ಅನೇಕ ಸಂಕಷ್ಟಗಳನ್ನು ಸ್ವಯಂಪ್ರೇರಣೆ ಯಿಂದ ಸಂತೋಷದಿಂದ ಸಹಿಸಬೇಕು.

೫ ನಿರಂತರ ಜಾಗರೂಕತೆ : ಈಗಾಗಲೇ ಮನಗಂಡಂತೆ ರಾಜಕೀಯ ನಮ್ಮ ಜೀವನದ ಅವಿಭಾಜ್ಯ ಅಂಗವಾಗಿ ಬಿಟ್ಟಿದೆ.ನಮ್ಮ ಜೀವನದ ಉಳಿದ ವಿಷಯಗಳ ಬಗ್ಗೆ ಚಿಂತನೆಯನ್ನು ಮಾಡುವ ಹಾಗೆ ನಾವು ನಮ್ಮ ರಾಜಕೀಯದ ಅಂದರೆ ಆಡಳಿತ ಪದ್ಧತಿಯ

ಬಗ್ಗೆ ಚಿಂತನೆಯನ್ನು ಸದಾ ಮಾಡುತ್ತಲೇ ಇರಬೇಕು, ಅದರ ಬಗ್ಗೆ ಆಸಕ್ತಿ ವಹಿಸಿ ಸದಾ ಜಾಗರೂಕರಾಗಿರಬೇಕು. ಪ್ರಜಾಪ್ರಭುತ್ವ ಯಶಸ್ವಿಯಾಗಬೇಕಾದರೆ ಜನತೆ ಅದರ ಮಹತ್ವವನ್ನು ಅರಿತು ಅದನ್ನು ಕಾಪಾಡಬೇಕು. ತಮ್ಮ ಹಕ್ಕುಗಳನ್ನು ಕಾಪಾಡಿಕೊಂಡು ಕರ್ತವ್ಯಗಳನ್ನು ಪಾಲಿಸಲು ಸಿದ್ಧರಾಗಿರಬೇಕು. ಪ್ರಜಾಪ್ರಭುತ್ವದ ಮೌಲ್ಯಗಳಲ್ಲಿ ನಿಷ್ಠೆಯಿರಬೇಕು. ಇಲ್ಲದೇ ಹೋದ ಪಕ್ಷದಲ್ಲಿ, ಪ್ರಜೆಗಳು ತಮ್ಮ ಹಕ್ಕು ಮತ್ತು ಸ್ವಾತಂತ್ರ್ಯಗಳನ್ನು ಕಳೆದು ಕೊಳ್ಳುವದಲ್ಲದೇ ದೇಶವನ್ನು ಸಹ ಗಂಡಾಂತರ ಪರಿಸ್ಥಿತಿಗೆ ನೂಕು ತ್ತಾರೆ. ಪ್ರಜಾಪ್ರಭುತ್ವದ ಬಗ್ಗೆ ತಿಳಿದುಕೊಳ್ಳುವ ಸಾಮರ್ಥ್ಯ ವಿಲ್ಲದ ಹಾಗೂ ಆದರ ಸರಕಾರದ ಕಾರ್ಯಕಲಾಪಗಳಲ್ಲಿ ಆಸಕ್ತಿ ತೆಗೆದುಕೊಳ್ಳದ ಪ್ರಜೆಗಳು ಅದನ್ನು ರಕ್ಷಿಸಿಕೊಳ್ಳಲಾರರು. ಪ್ರಜಾ ಪ್ರಭುತ್ವದ ರಕ್ಷಣೆಗೆ ಜನಜಾಗೃತಿ ಅವಶ್ಯ. ಜನಜಾಗೃತಿ ಹೆಚ್ಚಿ ದಂತೆ ಕಾಲಕ್ರಮೇಣ ನಮ್ಮ ಆಡಳಿತ ಪದ್ಧತಿಯಲ್ಲಿರುವ ಅನೇಕ ಅಡ್ಡಿಆತಂಕಗಳು ತಾವಾಗಿಯೇ ದೂರವಾಗುವದರಲ್ಲಿ ಸಂದೇಹವೇ ಇಲ್ಲ. ಈ ಸಾರಾಂಶವನ್ನು ಇಂಗ್ಲಂಡದ ಸುಪ್ರಸಿದ್ಧ ತತ್ವಜ್ಞಾನಿ, ರಾಜಕಾರಣಿಯಾದ ಎಡ್ಮಂಡ್ ಬರ್ಕ್ ಅವರ ಮಾತಿನಲ್ಲಿ ಹೇಳುವುದಾದರೆ Eternal vigilance is the price to be paid for liberty" ಜನತೆ ದೇಶದ ರಾಜಕೀಯ ಚಟುವಟಿಕೆಗಳನ್ನು ಜಾಗೃತೆಯಿಂದ ಗಮನಿಸುತ್ತ ಸರಕಾರವು ಕಾನೂನುಬಾಹಿರವಾಗಿ ವರ್ತಿಸಿದರೆ, ಅದರ ವಿರುದ್ಧ ಪ್ರತಿಭಟಿ ಸುವ ಮನೋಬಲ ಹೊಂದಿರಬೇಕು. ಚಿರಂತನ ಜಾಗೃತಿಯೇ ನಾವು ಪ್ರಜಾಪ್ರಭುತ್ವವನ್ನು ಉಳಿಸಿಕೊಳ್ಳಬೇಕಾದರೆ, ತೆರಬೇಕಾದ ಬೆಲೆ. ಸರಕಾರದ ದಬ್ಬಾಳಿಕೆ ಅನ್ಯಾಯಗಳನ್ನು ನಿರ್ಭೀತಿಯಿಂದ

ಜನರು ಪ್ರತಿಭಟಿಸಬೇಕು, ಅದು ಮಾಡುವ ಅನ್ಯಾಯಗಳನ್ನು ಬಯಲಿಗೆಳೆದು, ಸಾರ್ವಜನಿಕರ ಮುಂದಿಟ್ಟು, ಅವುಗಳನ್ನು ಸರಿಪಡಿಸುವ ಪ್ರಯತ್ನವನ್ನು ಮಾಡಬೇಕು. ಮೈತುಂಬ ಕಣ್ಣಾಗಿರುವ ಪ್ರಜೆಗಳೇ ಪ್ರಜಾಪ್ರಭುತ್ವದ ರಕ್ಷಕರೆನ್ನಬಹುದು.

೬ ರಾಜಕೀಯ ಪಕ್ಷಗಳು : ಪ್ರಜಾಪ್ರಭುತ್ವದಲ್ಲಿ ಸಾಮಾನ್ಯವಾಗಿ ಎರಡು ಪ್ರಕಾರಗಳನ್ನು ಮಾಡಲಾಗುತ್ತದೆ; ಪ್ರತ್ಯಕ್ಷ ಹಾಗೂ ಪರೋಕ್ಷ ಪ್ರಜಾಪ್ರಭುತ್ವ. ನಮ್ಮಲ್ಲಿರುವದು ಪರೋಕ್ಷ ಪ್ರಜಾಪ್ರಭುತ್ವ. ಈ ಪರೋಕ್ಷ ಪ್ರಜಾಪ್ರಭುತ್ವವೆಂದರೆ ಪಕ್ಷ ಸರಕಾರವೆಂದೇ ಅರ್ಥ. ಜನತೆಯ ಅಭಿಪ್ರಾಯಗಳನ್ನು ಸರಕಾರದ ಮುಂದೆಯೂ ಸರಕಾರದ ಅಭಿಪ್ರಾಯಗಳನ್ನು ಜನತೆಯ ಮುಂದೆಯೂ ಪ್ರತಿಪಾದಿಸಲು ರಾಜಕೀಯ ಪಕ್ಷಗಳು ಅತ್ಯವಶ್ಯಕವಾಗಿವೆ. ಆದ್ದರಿಂದ, ರಾಜಕೀಯ ಪಕ್ಷಗಳಿರದ ಪ್ರಜಾಪ್ರಭುತ್ವವನ್ನು ಊಹಿಸಿಕೊಳ್ಳುವದೇ ಸಾಧ್ಯವಿಲ್ಲ. ಇವುಗಳಿಲ್ಲದ ಪ್ರಜಾಪ್ರಭುತ್ವವೆಂದರೆ 'ನಾವಿಕನಿಲ್ಲದ ದೋಣಿಯಂತೆ, ಚುಕ್ಕಾಣಿ ಇಲ್ಲದ ಹಡಗಿನಂತೆ, ಎಂದು ಉಪಮೆಗಳ ಮುಖಾಂತರ ಊಹಿಸಬಹುದಾಗಿದೆ. ರಾಜಕೀಯ ಪಕ್ಷಗಳಿರಬೇಕಾದುದು ಅವಶ್ಯವೆಂದರೂ ಅವು ಬಹಳವಿರಬಾರದು. ಸಂಖ್ಯಾ ದೃಷ್ಟಿಯಿಂದ ಪಕ್ಷಗಳನ್ನು 'ಏಕಪಕ್ಷ ಪದ್ಧತಿ', 'ದ್ವಿ ಪಕ್ಷ ಪದ್ಧತಿ' ಹಾಗೂ 'ಬಹುಪಕ್ಷ ಪದ್ಧತಿ'ಗಳೆಂದು ವರ್ಗೀಕರಿಸುತ್ತಾರೆ: ಏಕಪಕ್ಷ ಪದ್ಧತಿಗೆ ಹಾಗೂ ಪ್ರಜಾಪ್ರಭುತ್ವಕ್ಕೂ ಎಣ್ಣೆ ಸೀಗೆಯ ಸಂಬಂಧ. ಬಹುಪಕ್ಷಗಳಿರುವದು ಪ್ರಜಾಪ್ರಭುತ್ವ ಪದ್ಧತಿಗೆ ವಿರುದ್ಧವಲ್ಲದಿದ್ದರು ಪೂರಕವಾದುದಲ್ಲ. ಕಾರಣ ನಮ್ಮಲ್ಲಿ ಪ್ರಜಾಪ್ರಭುತ್ವ ಇನ್ನಷ್ಟು ಬಲಗೊಳ್ಳಬೇಕಾದರೆ

ಎರಡೇ ಎರಡು ರಾಜಕೀಯ ಪಕ್ಷಗಳಿರಬೇಕಾದುದು ಅಪೇಕ್ಷಣೀಯ. ನಮ್ಮ ಜನತೆ ಈ ದಿಶೆಯಲ್ಲಿ ಕಾರ್ಯಪ್ರವೃತ್ತರಾಗಬೇಕು. ನಮ್ಮಲ್ಲಿ ಬಹಳಷ್ಟು ರಾಜಕೀಯ ಪಕ್ಷಗಳು ಆಗಿಹೋಗಿವೆ. ಈ ರಾಜಕೀಯ ಪಕ್ಷಗಳು ಮಳೆಗಾಲದಲ್ಲಿ ಬೆಳೆಯುವ 'ನಾಯಿಕೊಡೆ'ಗಳ ಹಾಗೆ, ಚುನಾವಣೆಗೆ ಮುಂದೆ ಹುಟ್ಟಿಕೊಂಡು ಚುನಾವಣೆಗಳು ಮುಗಿದ ಕೂಡಲೇ ಅದೃಶ್ಯಗೊಳ್ಳುತ್ತವೆ. ಇಂಥ ಪಕ್ಷಗಳಿಗೆ ನಮ್ಮ ಜನತೆ ಬೆಂಬಲ ಕೊಡಬಾರದು.

ದೇಶದಲ್ಲಿ ಉಚ್ಚ ಧ್ಯೇಯ ಹಾಗೂ ತತ್ವಗಳನ್ನು ಒಳಗೊಂಡ ಭದ್ರವಾದ ಆಡಳಿತವುಳ್ಳ, ನಿಸ್ವಾರ್ಥ ಸೇವೆ ಸಲ್ಲಿಸುವ, ಸುಸಂಘಟಿತ ಎರಡು ರಾಜಕೀಯ ಪಕ್ಷಗಳು ಬೇಕು. ಆಡಳಿತ ಪಕ್ಷದ ಜೊತೆಗೇನೇ ಸುಸಂಘಟಿತ ವಿರೋಧಿ ಪಕ್ಷವು ಇರಬೇಕಾದುದು ಅವಶ್ಯ. ದುರ್ದೈವದ ಸಂಗತಿ ಎಂದರೆ ನಮ್ಮ ಆಡಳಿತದ ಯಾವ ಮಟ್ಟದಲ್ಲೂ ವಿರೋಧಿ ಹಂತದಲ್ಲೂ ಪಕ್ಷಗಳು ಕ್ರಿಯಾತ್ಮಕ ಕಾರ್ಯಗಳಲ್ಲಿ ಭಾಗವಹಿಸುವದಿಲ್ಲ. ವಿರೋಧಿ ಪಕ್ಷ Search Light ನ ಹಾಗೆ ಕಾರ್ಯ ಮಾಡಬೇಕು. ಸರಕಾರದ ಲೋಪದೋಷಗಳನ್ನು ಎತ್ತಿ ಜನತೆಗೆ ಬಿಂಬಿಸಬೇಕು. ಪ್ರಜಾಪ್ರಭುತ್ವದಲ್ಲಿ, ಜನಜಾಗೃತಿ ಮಾಡುವದು ವಿರೋಧಿ ಪಕ್ಷಗಳ ಪ್ರಥಮ ಕರ್ತವ್ಯವೂ ಆಗಿದೆ. ಪ್ರತಿನಿಧಿ ಪ್ರಜಾಪ್ರಭುತ್ವವೆಂದರೆ ಬಹುಮತ ಪಡೆದ ರಾಜಕೀಯ ಪಕ್ಷದ ಅಧಿಕಾರ. ಬಹುಮತ ಪಕ್ಷವೆಂದರೆ ಆಡಳಿತ ಪಕ್ಷ ತನ್ನ ಅಧಿಕಾರವನ್ನು ದುರುಪಯೋಗ ಪಡಿಸಿಕೊಳ್ಳಬಾರದು. ಅಲ್ಪಸಂಖ್ಯಾತರ ಹಿತಾಸಕ್ತಿಗಳನ್ನು ರಕ್ಷಿಸಬೇಕು, ಅವರ ಟೀಕೆಯನ್ನು ಸಹನೆಯಿಂದ

ಕೇಳಬೇಕು. ಹಾಗೆಯೇ ಅಲ್ಪಸಂಖ್ಯಾತ ಪಕ್ಷಗಳು (ವಿರೋಧ ಪಕ್ಷಗಳು) ಸಲಹೆ ಮತ್ತು ಒಪ್ಪಿಗೆಯ ಮನೋಭಾವ ತಾಳಿ ಬಹುಮತದ ಆಧಾರದ ಮೇಲೆ ಮಾಡಿದ ಕಾನೂನುಗಳಿಗೆ ವಿಧೇಯತೆ ತೋರಿಸಬೇಕು. ತಮ್ಮ ನ್ಯಾಯಯುತವಾದ ಬೇಡಿಕೆಗಳಿಗೆ ಆಡಳಿತ ಪಕ್ಷದ ಮನ್ನಣೆ ದೊರೆಯದಿದ್ದರೂ ಅಸಹನೆಯಿಂದ ವರ್ತಿಸಬಾರದು. ಹಿಂಸಾತ್ಮಕ ಚಳುವಳಿಗೆ ಕೈಹಾಕದೇ ಬಹುಮತ ಪಕ್ಷದ ಆಡಳಿತವನ್ನು ತಾಳಿಕೊಂಡು ಮುಂದಿನ ಚುನಾವಣೆಯತ್ತ ತಮ್ಮ ಗಮನ ಹರಿಸಿ ಜನತೆಯಲ್ಲಿ ತಮ್ಮ ಪಕ್ಷದ ಧ್ಯೇಯ ಧೋರಣೆಗಳನ್ನು ಬಿಂಬಿಸಿ ಮುಂದಿನ ಚುನಾವಣೆಯಲ್ಲಿ ಜಯಗಳಿಸಲು ಪ್ರಯತ್ನಿಸಬೇಕು. ಇಂದಿನ ಅಲ್ಪಸಂಖ್ಯಾತ ರಾಜಕೀಯ ಪಕ್ಷಗಳು ಮುಂದೆ ಬಹು ಸಂಖ್ಯಾತ ರಾಜಕೀಯ ಪಕ್ಷವಾಗುವ ಸಾಧ್ಯತೆಯನ್ನು ಮರೆಯಬಾರದು. ಸರಕಾರದಲ್ಲಿ ಕಂಡು ಬರುವ ಲೋಪ-ದೋಷಗಳನ್ನು ಜನರಿಗೆ ಎತ್ತಿತೋರಿಸಿ ಸರಕಾರ ಅವುಗಳನ್ನು ತಿದ್ದಿಕೊಳ್ಳುವಂತೆ ಮಾಡಬೇಕು. ಬಹುಮತ ಪಕ್ಷ ಹಾಗೂ ಅಲ್ಪಸಂಖ್ಯಾಕರ ಪಕ್ಷಗಳು ಪರಸ್ಪರ ಸಹಕರಿಸಿ ತಮ್ಮ ಜವಾಬ್ದಾರಿಯನ್ನರಿತು ಕೆಲಸ ಮಾಡಬೇಕು, ಇಲ್ಲದಿದ್ದಲ್ಲಿ ಪ್ರಜಾಪ್ರಭುತ್ವ ಯಶಸ್ವಿಯಾಗಲಾರದು.

ಪ್ರಜಾಪ್ರಭುತ್ವದ ಬುನಾದಿಯಂತಿರುವ ನಮ್ಮ 'ಪಂಚಾಯತಿ ರಾಜ್ಯ' ವ್ಯವಸ್ಥೆ ಯಶಸ್ವಿಯಾಗಬೇಕಾದರೆ ದೇಶದಲ್ಲಿರುವ ರಾಜಕೀಯ ಪಕ್ಷಗಳು, ತತ್ವಭೇದಗಳನ್ನು ಮರೆತು, ಜನಸಾಮಾನ್ಯರಿಗೆ ರಾಜಕೀಯ ಶಿಕ್ಷಣವನ್ನು ನೀಡುವಲ್ಲಿ ಮುಂದಾಗಬೇಕು.

ಈ ದಿಶೆಯಲ್ಲಿ ಆಗಬೇಕಾದ ಒಂದು ಮಹತ್ವದ ಸುಧಾರಣೆ ಎಂದರೆ:- ನಮ್ಮ ಗ್ರಾಮೀಣ ಪ್ರದೇಶಗಳು ಪಕ್ಷರಹಿತ ವಾತಾವರಣದಲ್ಲಿರಬೇಕು; ಇಲ್ಲದಿದ್ದರೆ ಪಂಚಾಯತಿ ರಾಜ್ಯದ ಉದ್ದೇಶವೇ ವಿಫಲವಾಗುವದರಲ್ಲಿ ಸಂಶಯವಿಲ್ಲ. ಇದೇ ಅಭಿಪ್ರಾಯವನ್ನು ಕಾಂಗ್ರೆಸ್ ಪಕ್ಷ ೧೯೬೧ ರ ಭಾವನಗರ ಅಧಿವೇಶನದಲ್ಲಿ ಅಂಗೀಕರಿಸಿತ್ತು. "ಪಂಚಾಯತ ರಾಜ್ಯ ವ್ಯವಸ್ಥೆಯಲ್ಲಿ ರಾಜಕೀಯ ಪಕ್ಷಗಳ ಪಾತ್ರ" ಎಂಬ ವಿಷಯವನ್ನು ಬಲವಂತರಾವ್ ಮೆಹತಾ ಮಂಡಿಸಿದ್ದರು. ಶ್ರೀ. ಎಸ್. ಕೆ. ಡೇ ಅನುಮೋದಿಸಿದ್ದರು. ಪಂ. ಜವಾಹರಲಾಲ ನೆಹರು ಹಾಗೂ ರಘುವೀರ ಬೆಂಬಲಿಸಿದ್ದರು. ಆ ಗೊತ್ತುವಳಿಯ ಪ್ರಕಾರ 'ಪಂಚಾಯತಿ ರಾಜ್ಯ ವ್ಯವಸ್ಥೆ'ಗೆ ನಡೆಯುವ ಚುನಾವಣೆಗಳು ರಾಜಕೀಯ ಪಕ್ಷಗಳ ಗೊಂದಲದಿಂದ ದೂರವಾಗಿರಬೇಕು? ಅವುಗಳು ಯಾವದೇ ರೀತಿಯಿಂದ ಹಸ್ತಕ್ಷೇಪ ಮಾಡಕೂಡದು ಎಂದು ನಿರ್ಣಯಿಸಲಾಗಿತ್ತು. ಅಧಿಕಾರರೂಢ ಪಕ್ಷ ಇಂತಹ ತತ್ವವನ್ನು ತಾನು ಅನುಸರಿಸಿಕೊಳ್ಳಬೇಕಲ್ಲದೇ, ದೇಶದಲ್ಲಿನ ಇನ್ನುಳಿದ ಪಕ್ಷಗಳನ್ನು ಸಹ ಈ ದಿಶೆಯಲ್ಲಿ ಮನವೊಲಿಸಿ ಇಂತಹ ಸಭ್ಯ ಒಪ್ಪಂದಕ್ಕೆ ಬರುವಂತೆ ಕ್ರಿಯಾತ್ಮಕವಾಗಿ ಕೆಲಸ ಮಾಡಬೇಕೆಂದು ಹೇಳಲಾಯಿತು. ಗ್ರಾಮೀಣ ಜನತೆಯ ಭೌತಿಕ ಹಾಗೂ ನೈತಿಕ ಅಭಿವೃದ್ಧಿಯ ಕಾರ್ಯ ಎಲ್ಲ ಪಕ್ಷಗಳಿಗೆ ಸೇರಿದ ಕಾರ್ಯವಾಗಿದೆ. ಇಂತಹ ರಾಜಕೀಯ ವಾತಾವರಣದಿಂದ ಹಳ್ಳಿಗಳ ಏಕತೆ ಸಾಧ್ಯ.

ಕಾರಣ ನಮ್ಮ ಗ್ರಾಮೀಣ ಜನತೆ ಈ ಎಲ್ಲ ಅಂಶಗಳನ್ನು ಲಕ್ಷವಲ್ಲಿಟ್ಟುಕೊಂಡು ರಾಜಕೀಯ ಪಕ್ಷಗಳ ಜೊತೆಗೆ ವರ್ತಿಸಬೇಕು.

೭. ವೃತ್ತ ಪತ್ರಿಕೆಗಳು:—

'ವಾಲ್ಟರ್ ಲಿಪ್‌ಮನ್‌ರವರು' ವೃತ್ತಪತ್ರಿಕೆಗಳನ್ನು "ಪ್ರಜಾಪ್ರಭುತ್ವದ ಬೈಬಲ್" ಎಂದು ಕರೆದಿದ್ದಾರೆ. ಡಿ.ವ್ಹಿ.ಜಿ.ಯವರು "ವೃತ್ತ ಪತ್ರಿಕೆ ಪ್ರಜೆಯ ಅಂತರಂಗ"ವೆಂದು ಕರೆದಿದ್ದಾರೆ. ಪತ್ರಿಕೆಗಳು ಬೋಧಪ್ರದವಾಗಿರುವದರ ಜೊತೆಗೆ ಪ್ರಜಾಭಿಪ್ರಾಯವನ್ನು ರೂಪಿಸುತ್ತವೆ, ಅವುಗಳು ಪ್ರಜಾಪ್ರಭುತ್ವದ ಕಣ್ಣು ಕಿವಿಗಳಿದ್ದ ಹಾಗೆ ಎಂದು ಹೇಳಿದರೆ ಉತ್ಪ್ರೇಕ್ಷೆಯಾಗಲಿಕ್ಕಿಲ್ಲ. ಡಿ.ವ್ಹಿ.ಜಿ. ಇದ್ನೊಂದು ಕಡೆಗೆ ಹೇಳಿರುವಂತೆ "ರಾಜನಿಗೆ ಮಂತ್ರಿಗಳು ಹೇಗೋ ಪ್ರಜೆಗಳಿಗೆ ಪತ್ರಿಕೆಗಳು" ಜಗತ್ತಿನಲ್ಲಿ ಸಂಭವಿಸುವ ಎಲ್ಲ ರಾಜಕೀಯ ಘಟನೆಗಳ ಬಗ್ಗೆ ವೃತ್ತಪತ್ರಿಕೆಗಳು ವರದಿ ಮಾಡುತ್ತವೆ. ಪ್ರಚಲಿತ ವಿಷಯಗಳ ಮೇಲೆ ಬೆಳಕು ಬೀರುತ್ತವೆ.ಅಷ್ಟೇ ಅಲ್ಲದೇ ಸರಕಾರದ ದೋಷಪೂರಿತ ನೀತಿಯನ್ನು ಟೀಕಿಸಿ, ಆಡಳಿತ ಯಂತ್ರದ ಲೋಪದೋಷಗಳನ್ನು ನಮಗೆ ಎತ್ತಿ ತೋರಿಸುತ್ತವೆ. ಸರಕಾರವು ಪ್ರಜೆಗಳೊಂದಿಗೆ ಸಂಪರ್ಕವನ್ನಿರಿಸಿಕೊಳ್ಳಲು ಸಹಾಯಕಾರಿಯಾಗಿವೆ. ಇವು ಪ್ರಜಾಪ್ರಭುತ್ವದ ಸಂರಕ್ಷಕರು ಇದ್ದಂತೆ.

ನಮ್ಮ ಗ್ರಾಮೀಣ ಜನತೆ ಸುಶಿಕ್ಷಿತರಾಗಿರಬೇಕಾದುದು ಅತ್ಯವಶ್ಯವಲ್ಲದೇ ದಿನನಿತ್ಯದ ರಾಜಕೀಯ ಪರಿಸ್ಥಿತಿಯನ್ನು ಅರಿತುಕೊಳ್ಳುವದಕ್ಕಾಗಿ ವೃತ್ತಪತ್ರಿಕೆಗಳನ್ನು ಓದುವದು ಅವಶ್ಯವಾಗಿದೆ. ವಿಶೇಷ ಹಾಗೂ ಹೆಚ್ಚಿನ ಜ್ಞಾನವನ್ನು ಹೊಂದದ ನಮ್ಮ ಸಾಮಾನ್ಯ ಜನತೆ ವೃತ್ತಪತ್ರಿಕೆಗಳ ಮುಖಾಂತರ ಪ್ರಚಲಿತ ಸಮಸ್ಯೆಗಳನ್ನು ಅರಿತುಕೊಳ್ಳಬೇಕು. ವೃತ್ತಪತ್ರಿಕೆಗಳು ಸಾರ್ವಜನಿಕರಿಗಾಗುತ್ತಿರುವ ತೊಂದರೆಗಳನ್ನು ಸರಕಾರದ ಲಕ್ಷಕ್ಕೆ ತರುವದಲ್ಲದೇ, ಜನರ ಭಾವನೆಗಳು ಮತ್ತು ವಿಚಾರಗಳನ್ನು ಕೂಡಾ

ಪತ್ರಿಕೆಗಳು ಸರಕಾರದ ಗಮನಕ್ಕೆ ತರುತ್ತವೆ. ಪ್ರಜಾಪ್ರಭುತ್ವದ ಯಶಸ್ಸಿಗಾಗಿ ಸ್ವತಂತ್ರ ಮತ್ತು ವಿಚಾರಶೀಲ ಪತ್ರಿಕೆಗಳು ಅವಶ್ಯವೆಂಬುದು ನಿರ್ವಿವಾದ. ಹೀಗೆಂದಾಕ್ಷಣ ಪತ್ರಿಕೆಗಳೆಲ್ಲವೂ ನಿಷ್ಪಕ್ಷಪಾತವಾಗಿವೆ ಎಂಬ ಅಭಿಪ್ರಾಯ ತಾಳಬಾರದು. ಕೆಲವೊಂದು ಪೀತಪತ್ರಿಕೆಗಳೂ ಇರಬಹುದು. ಕಾರಣ ಜನತೆ ಈ ಪತ್ರಿಕೆಗಳ ವಿಶ್ವಾಸಾರ್ಹತೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಓದಬೇಕು. ಸಾರ್ವಜನಿಕ ಅಭಿಪ್ರಾಯವನ್ನು ರೂಪಿಸುವಲ್ಲಿ ಪತ್ರಿಕೆಗಳಿಗೆ ಅಗ್ರಸ್ಥಾನವಿದೆ ಎಂಬುದರಲ್ಲಿ ಎರಡು ಮಾತಿಲ್ಲ.

೮) ಶಾಂತಿಯುತ ಹಾಗೂ ಸಂವಿಧಾನಾತ್ಮಕ ಮಾರ್ಗಗಳು

ನಮ್ಮ ದಿನಪತ್ರಿಕೆಗಳು ನಮಗೆ ತಲುಪುವ ಮೊದಲೇ ನಾವು ಅದರೊಳಗಿರಬಹುದಾದ ಸುದ್ದಿ ಸಮಾಚಾರಗಳನ್ನು ಊಹಿಸಿಕೊಳ್ಳಬಹುದು. ಪಂಜಾಬದಲ್ಲಿ ಇಂದು ಎಷ್ಟು ಜನರನ್ನು ಭಯೋತ್ಪಾದಕರು ಕೊಂದಿದ್ದಾರೆ, ಗೂರ್ಖಾಲ್ಯಾಂಡ ಚಳವಳಿಯ ವಿಷಯ, ಕಾರ್ಮಿಕರ ವಿದ್ಯಾರ್ಥಿಗಳ ಚಳುವಳಿ ಸುದ್ದಿಗಳೇ, ಇಂಥ ಕೃತ್ಯಗಳು ಪ್ರಜಾಪ್ರಭುತ್ವದ ಬಲವರ್ಧನೆಗೆ ಮಾರಕ ಎನ್ನಬಹುದು. ಪ್ರಜಾಪ್ರಭುತ್ವವೆಂದರೆ ಚರ್ಚೆ ಹಾಗೂ ಮನವೊಲಿಸುವುದರ ಮೂಲಕವಾಗಿ ನಡೆಸುವ ಸರಕಾರವಾಗಿದೆ. ನಮ್ಮ ಜನತೆ ಆದಷ್ಟು ತೀವ್ರ ಈ ಹಿಂಸಾಮಾರ್ಗವನ್ನು ತ್ಯಜಿಸಬೇಕು. ಹಿಂಸಾಮಾರ್ಗ ಪ್ರಜಾಪ್ರಭುತ್ವ ಮತ್ತು ನಾಗರಿಕತೆಯ ಶತ್ರುವಾಗಿದೆ. ಹಿಂಸೆಯಿಂದ ನಾವು ಏನನ್ನೂ ಸಾಧಿಸುವದು ಸಾಧ್ಯವಿಲ್ಲ. ಬದುಕಿನಲ್ಲಿ ಭಿನ್ನಾಭಿಪ್ರಾಯಗಳು ಬರುವದು ಸಹಜ. ಆವುಗಳು ವ್ಯಕ್ತಿಗಳ ಮಧ್ಯದಲ್ಲಿರಬಹುದು, ವ್ಯಕ್ತಿ ಸರಕಾರಗಳ ಮಧ್ಯದಲ್ಲಿ

ರಬಹುದು, ಜನತೆ ಸರಕಾರದ ಮಧ್ಯದಲ್ಲಿರಬಹುದು ಅವುಗಳನ್ನೆಲಾ ಶಾಂತಿಯುತ ಹಾಗೂ ಸಂವಿಧಾನಾತ್ಮಕ ಮಾರ್ಗಗಳ ಮೂಲಕ ಪರಿಹರಿಸಿಕೊಳ್ಳಲು ಪ್ರಯತ್ನಿಸಬೇಕು. ಸಂವಿಧಾನಾತ್ಮಕ ಮಾರ್ಗಗಳ ಮೂಲಕ ಬಗೆಹರಿಸಿಕೊಳ್ಳಲಾರದ ಸಮಸ್ಯೆಗಳು. ಜನರ ಹಟವಾರಿತನದ ಪ್ರತೀಕಗಳು.

ನಾವು ರಾಷ್ಟ್ರದ ಸಂವಿಧಾನವನ್ನು ಅರಿತುಕೊಂಡು ಅನು ಸರಿಸಬೇಕು. ಅರಿತುಕೊಳ್ಳುವದು ಸಾಧ್ಯವಾಗದಿದ್ದರೆ ಅದನ್ನು ಗೌರವಿಸುವದನ್ನಾದರೂ ಕಲಿತುಕೊಳ್ಳಬೇಕು. ಪ್ರಜಾಪ್ರಭುತ್ವ ವನ್ನು ನಂಬಿ ನಡೆದಿರುವ ನಮಗೆ ಸಹನಶೀಲ ಗುಣವಿರಬೇಕು. ಎಲ್ಲರೂ ಪರಸ್ಪರ ಹೊಂದಿಕೊಂಡು ಮೈತ್ರಿಯಿಂದಿರಬೇಕು. ಸಾಂಘಿಕ ಜೀವನದಲ್ಲಿ ಸ್ವಾಭಾವಿಕವಾಗಿ ಉದ್ಭವಿಸುವ ಭಿನ್ನಾ ಭಿಪ್ರಾಯಗಳನ್ನು ಬಗೆಹರಿಸಿಕೊಳ್ಳಲು ಶಾಂತಿಯುತ ಮಾರ್ಗ ವನ್ನು ಅನುಸರಿಸಬೇಕು. ಬಲಪ್ರಯೋಗ ನಮ್ಮ ಅಸ್ತ್ರ ವಾಗಬಾರದು. ಎಲ್ಲರೂ ಮುಕ್ತಮನಸ್ಸಿನಿಂದ ಸಹನೆಯಿಂದ ವರ್ತಿಸಬೇಕು.

೫. ಹಕ್ಕುಗಳು ಹಾಗೂ ಕರ್ತವ್ಯಗಳು

ನಮ್ಮ ಗ್ರಾಮೀಣ ಜನತೆ ಅರಿತುಕೊಂಡಿರಲೇಬೇಕಾದ ಅರಿತುಕೊಂಡು ಆ ಬಗೆಗೆ ಆಲೋಚನೆ ಮಾಡಬೇಕಾದ ಇನ್ನೆರಡು ಪ್ರಮುಖ ಅಂಶಗಳೆಂದರೆ ತಮಗೆ ಸಂವಿಧಾನಾತ್ಮಕವಾಗಿ ಕೊಡಮಾಡಲ್ಪಟ್ಟ ಮೂಲಭೂತ ಹಕ್ಕುಗಳು ಯಾವವು.

ಹಾಗೂ ಅದಕ್ಕೆ ಪ್ರತಿಯಾಗಿ ತಾವು ದೇಶಕ್ಕಾಗಿ ಮಾಡಬೇಕಾದ ಕರ್ತವ್ಯಗಳಾವವು? ಎಂಬುದನ್ನು.

ಹಕ್ಕುಗಳು ಸಮಾಜ ಜೀವನದ ಅವಶ್ಯಕವಾದ ಅಂಶಗಳು. ಅವುಗಳು ಇಲ್ಲದೇ ಮಾನವನ ಸಾಮಾಜಿಕ ಜೀವನದ ವಿಕಾಸವಾಗ ಲಾರದು. ಈ ಅಂಶವನ್ನು ಮನಗಂಡು ಎಲ್ಲ ಸ್ವತಂತ್ರ ದೇಶಗಳು ತಮ್ಮ ನಾಗರಿಕರಿಗೆ ಹಲವಾರು ರೀತಿಯ ಹಕ್ಕು ಹಾಗೂ ಸ್ವಾತಂತ್ರ್ಯ ಗಳನ್ನು ಕೊಟ್ಟುದುದನ್ನು ನಾವು ಕಾಣುತ್ತೇವೆ. ಹಕ್ಕುಗಳನ್ನು ಕೊಡುವುದರ ಮುಖ್ಯ ಮೂರು ಉದ್ದೇಶಗಳೆಂದರೆ ವ್ಯಕ್ತಿತ್ವವಿಕಾಸ ಕ್ಕಾಗಿ, ನಿಯಂತ್ರಿತ ಸರಕಾರವನ್ನು ಸ್ಥಾಪಿಸುವದಕ್ಕಾಗಿ, ಹಾಗೂ ಅಲ್ಪ ಸಂಖ್ಯಾತರರಿಗೆ ಭರವಸೆಯನ್ನೊದಗಿಸುವದಕ್ಕಾಗಿ.

ಒಂದು ರಾಜ್ಯದ ಜೀವನಾಡಿ ಅದು ತನ್ನ ನಾಗರಿಕರಿಗೆ ಕೊಡುವ ಹಕ್ಕುಗಳನ್ನು ಹಾಗೂ ಅವುಗಳನ್ನು ಕಾಪಾಡಿಕೊಂಡು ಬರುವದರಲ್ಲಿದೆ ಒಂದು ರಾಜ್ಯದಲ್ಲಿ ಪ್ರಜೆಗಳು ಹೊಂದಿರುವ ಹಕ್ಕುಗಳನ್ನು ಪರಿಶೀಲಿಸಿ ಆ ರಾಜ್ಯವು ಸುವ್ಯವಸ್ಥಿತವಾಗಿದೆಯೇ ಅಥವಾ ಇಲ್ಲವೇ ಎಂಬುದನ್ನು ನಿರ್ಧರಿಸಬಹುದು. ಸಮಾಜದ ಪ್ರಗತಿ ವ್ಯಕ್ತಿಯ ಪ್ರಗತಿಯನ್ನು ಅವಲಂಬಿಸಿದೆ. ವ್ಯಕ್ತಿಯ ಪ್ರಗತಿ ಅವನ ಹಕ್ಕುಗಳನ್ನವಲಂಬಿಸಿದೆ. ನಾಗರಿಕತೆ ಬೆಳದಂತೆ ಹಕ್ಕುಗಳು ಹಾಗೂ ಬಾಧ್ಯತೆಗಳು ಬೆಳೆಯುತ್ತವೆ.

ಇಂತಹ ಹಕ್ಕುಗಳು. ಅವಕಾಶಗಳು ನಮಗೆ ಬೇಕೆಂದು ನಮ್ಮ ಜನ ಸ್ವಾತಂತ್ರ್ಯಕ್ಕೂ ಪೂರ್ವದಲ್ಲಿಯೇ ಅನೇಕ ಬೇಡಿಕೆಗಳನ್ನು ಬ್ರಿಟೀಷರ ಮುಂದಿಟ್ಟಿದ್ದರು. ಆದರೆ ಅವರು ಆ ಬೇಡಿಕೆಗಳನ್ನೆಲ್ಲಾ

ಲಘುವಾಗಿ ಕಂಡು ತಿರಸ್ಕರಿಸಿದ್ದರು. ೧೯೨೫ ರಲ್ಲಿ 'ಸ್ವರಾಜ್ಯ ಪಕ್ಷ', ೧೯೧೯ ರಲ್ಲಿ ಮುಂಬಯಿ ಅಧಿವೇಶನದಲ್ಲಿ ಕಾಂಗ್ರೆಸ್ ಪಕ್ಷ, ೧೯೨೮ ರಲ್ಲಿ ಮೋತಿಲಾಲ ನೆಹರು ಸಮಿತಿ, ೧೯೩೦ ರ ಎರಡನೇ ದುಂಡುಮೇಜಿನ ಪರಿಷತ್ತಿನಲ್ಲಿ, ೧೯೪೫ ರಲ್ಲಿ ಸರ್ ತೇಜ ಬಹಾದ್ದೂರ ಸಪ್ರು ಸಮಿತಿ ಹೀಗೆ ವಿವಿಧ ಸಂದರ್ಭಗಳಲ್ಲಿ ಈ ಬಗ್ಗೆ ಬೇಡಿಕೆಗಳನ್ನೂ ಸಲ್ಲಿಸಿ ನಿರಾಶೆಗೊಂಡಿದ್ದವು.

ಸ್ವಾತಂತ್ರ್ಯಾನಂತರ ನಮ್ಮ ಸಂವಿಧಾನ ರಚನಾ ಸಮಿತಿ ಸರಕಾರ ವಲ್ಲಭಬಾಯಿ ಪಟೇಲರ ನೇತೃತ್ವದಲ್ಲಿ ೫೪ ಸದಸ್ಯರ ಒಂದು ಸಮಿತಿಯನ್ನು ರಚಿಸಿ ಮೂಲಭೂತ ಹಕ್ಕುಗಳ ಬಗೆಗೆ ವರದಿ ಸಲ್ಲಿಸಲು ಅದನ್ನು ಕೇಳಿಕೊಂಡಿತು. ಈ ಸಮಿತಿ ಎರಡು ಪ್ರಕಾರದ ಹಕ್ಕುಗಳನ್ನು ಶಿಫಾರಸ್ಸ್ ಮಾಡಿತು. ಮೊದಲನೆಯದು ಮೂಲಭೂತ ಹಕ್ಕುಗಳಾದರೆ, ಎರಡನೆಯದು ರಾಷ್ಟ್ರನೀತಿಯ ನಿರ್ದೇಶಕ ತತ್ವಗಳು. ಈ ವಿಷಯುವಾಗಿ ನಾವು ಐರಲ್ಯಾಂಡ್ ಪದ್ಧತಿಯನ್ನು ಅನುಸರಿಸಿದ್ದೇವೆ.

ಸಂವಿಧಾನದ ೧೨ ವಿಧಿಯಿಂದ ೩೫ ರ ವರೆಗಿನ ವಿಧಿಗಳು ಮೂಲಭೂತ ಹಕ್ಕುಗಳನ್ನು ವಿವರಿಸುತ್ತವೆ. ನಾಗರಿಕ ಹಕ್ಕುಗಳು ಭಾರತೀಯ ಪೌರ ಹಾಗೂ ವಿದೇಶೀಯರಿಬ್ಬರಿಗೂ ನೀಡಲಾಗಿವೆ. ರಾಜಕೀಯ ಹಕ್ಕುಗಳನ್ನು ಕೇವಲ ಭಾರತೀಯ ಪೌರರಿಗೆ ಮಾತ್ರ ನೀಡಲಾಗಿರುತ್ತದೆ. ಹೀಗೆ ನೀಡಲ್ಪಾದ ಹಕ್ಕುಗಳ ಮೇಲೆ ಸಮಾಜದ ಹಿತದ ದೃಷ್ಟಿಯಿಂದ ರಾಜ್ಯ ನಿರ್ಬಂಧನೆಗಳನ್ನು ಹೇರಬಹುದು; ಆದರೆ ಇವುಗಳಿಗೆ ನ್ಯಾಯಾಂಗದ ರಕ್ಷಣೆ ಒದಗಿಸಲಾಗಿದೆ. ಹಕ್ಕುಗಳ

ನ್ನೊಳಗೊಂಡ ನಮ್ಮ ಸಂವಿಧಾನದ ೩ನೇ ಭಾಗವನ್ನು 'ಸಂವಿಧಾನದ ಆತ್ಮ' (Soul of the Constitution) ಎಂದೇ ಪರಿಗಣಿಸಲಾಗುತ್ತದೆ.

ನಮ್ಮೆಲ್ಲರಿಗೆ ಕೊಡಮಾಡಲಾಗಿರುವ ಮೂಲಭೂತ ಹಕ್ಕುಗಳನ್ನು ಸಂಕಿಪ್ತವಾಗಿ ಪರಿಚಯಿಸುವುದಾದರೆ:

೧) **ಸಮಾನತೆಯ ಹಕ್ಕು :** ೧೪ ರಿಂದ ೧೮ರ ವರೆಗಿನ ವಿಧಿಗಳು ವ್ಯಕ್ತಿಗಳ ನಡುವೆ ಭೇದಭಾವ ಮಾಡುವದನ್ನು ತಡೆಗಟ್ಟುತ್ತದೆ, ೧೪ ನೆಯ ವಿಧಿಯ ಪ್ರಕಾರ ಕಾಯ್ದೆಯ ದೃಷ್ಟಿಯಲ್ಲಿ ಎಲ್ಲರೂ ಸರಿಸಮಾನರು. ೧೫ ನೆಯ ವಿಧಿಯ ಪ್ರಕಾರ ಯಾವದೇ ವ್ಯಕ್ತಿಗೆ ಧರ್ಮ, ಜಾತಿ, ಲಿಂಗ ಸ್ಥಳಗಳ ಆಧಾರದ ಮೇಲೆ ಭೇದ ಭಾವ ಮಾಡಕೂಡದು ಎಂದು ಹೇಳಲಾಗಿದೆ. ಇದಕ್ಕೆ ಅಪವಾದದ ರೂಪದಲ್ಲಿ — ಹಿಂದುಳಿದ ವರ್ಗಗಳ ಸುಧಾರಣೆಗಾಗಿ ಮಾಡುವ ಕ್ರಮಗಳನ್ನು ಯಾರೂ ವಿರೋಧಿಸುವಂತಿಲ್ಲ. ಸ್ತ್ರೀಯರು ಹಾಗೂ ಚಿಕ್ಕಮಕ್ಕಳಿಗೆ ಕೆಲವೊಂದುಸಾರೆ ವಿಶೇಷ ಸೌಲಭ್ಯಗಳನ್ನು ಕೊಡಬಹುದು. ೧೬ ನೆಯ ವಿಧಿಯ ಪ್ರಕಾರ ಸಾರ್ವಜನಿಕ ನೌಕರಿಯಲ್ಲಿ ಎಲ್ಲರಿಗೂ ಸಮಾನವಾದ ಅವಕಾಶ ಕಲ್ಪಿಸಿಕೊಡಲಾಗಿದೆ. ೧೭ನೆಯ ವಿಧಿಯ ಪ್ರಕಾರ ಅಸ್ಪೃಶ್ಯತಾ ಆಚರಣೆಯನ್ನು ನಿಷೇಧಿಸಲಾಗಿದೆ. ೧೯೫೫ ರ ಅಸ್ಪೃಶ್ಯತಾನಿವಾರಣಾ ಕಾಯ್ದೆಯನ್ವಯ ಅಸ್ಪೃಶ್ಯತೆಯನ್ನು ಆಚರಿಸಿದವರಿಗೆ ಒಂದು ತಿಂಗಳ ಕಠಿಣ ಶಿಕ್ಷೆಯನ್ನು ಹಾಗೂ ೫೦೦ ರೂಪಾಯಿಗಳ ದಂಡವನ್ನು ವಿಧಿಸಲಾಗುತ್ತದೆ. ೧೮ ನೆಯ ವಿಧಿಯ ಪ್ರಕಾರ ನಾಗರಿಕರಿಗೆ ಬಿರುದು ಬಾವಲಿಗಳನ್ನು ನೀಡುವದನ್ನೂ ನಿಷೇಧಿಸಲಾಗಿದೆ. ಇದಕ್ಕಿರುವ ಅಪವಾದವೆಂದರೆ

ಸೈನ್ಯ ಹಾಗೂ ಸಾಹಿತ್ಯ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿದವರಿಗೆ ಬಿರುದು ಬಾವಲಿಗಳನ್ನು ನೀಡಬಹುದು; ಹಾಗೂ ವಿಶ್ವವಿದ್ಯಾಲಯಗಳು ಪ್ರತಿಭಾವಂತರಿಗೆ ಪ್ರಶಸ್ತಿ ಹಾಗೂ ಬಿರುದುಗಳನ್ನು ಕೊಡಬಹುದು.

ಹೀಗೆ ಸಮಾನತೆಯ ಹಕ್ಕಿನ ಉದ್ದೇಶವು ಸರಕಾರವು ತಾರತಮ್ಯ ತೋರದಂತೆ ಮಾಡುವದು ಹಾಗೂ ಹಿಂದುಳಿದ ವರ್ಗಗಳಿಗೆ ವಿಶೇಷ ಸೌಲಭ್ಯಗಳನ್ನು ನೀಡಿ ಅವರನ್ನು ಮುಂದೆ ತರುವುದಾಗಿದೆ.

೨)ಸ್ವಾತಂತ್ರ್ಯದ ಹಕ್ಕು: ಸಂವಿಧಾನದ ೧೯ ರಿಂದ ೨೨ರ ವರಗಿನ ವಿಧಿಗಳು ಈ ಹಕ್ಕುಗಳನ್ನೊಳಗೊಂಡಿವೆ. ೧೯ನೇ ವಿಧಿಯು ನಮಗೆ ೭ ಪ್ರಕಾರದ ಸ್ವಾತಂತ್ರ್ಯಗಳನ್ನು ನೀಡಿದೆ. ಅವುಗಳೆಂದರೆ:-

ಎ) ವಾಕ್ ಸ್ವಾತಂತ್ರ್ಯ

ಬಿ) ಅಪಾಯಕಾರೀ ಆಯುಧಗಳಿಲ್ಲದೇ ಸಭೆ ಕೂಡುವ ಸ್ವಾತಂತ್ರ್ಯ

ಸಿ) ಸಂಘ ಸಂಸ್ಥೆಗಳನ್ನು ರಚಿಸಿಕೊಳ್ಳುವ ಸ್ವಾತಂತ್ರ್ಯ

ಡಿ) ಭಾರತದಾದ್ಯಂತ ಮುಕ್ತವಾಗಿ ಸಂಚರಿಸುವ ಸ್ವಾತಂತ್ರ್ಯ

ಇ) ದೇಶದ ಯಾವದೇ ಭಾಗದಲ್ಲಿ ನೆಲೆಸುವ ಸ್ವಾತಂತ್ರ್ಯ

ಎಫ್) ಆಸ್ತಿಯನ್ನು ಗಳಿಸುವ, ಅನುಭವಿಸುವ ಹಾಗೂ ವಿಸರ್ಜಿಸುವ ಸಾತಂತ್ರ್ಯ

ಜಿ) ಯಾವುದೇ ಉದ್ಯೋಗ ಕೈಕೊಳ್ಳುವ ಸ್ವಾತಂತ್ರ್ಯ

೨೦ ನೇ ವಿಧಿಯು ಅಪರಾಧವೆಸಗಿದ ವ್ಯಕ್ತಿಗೆ ಈ ಮೂರು ಬಗೆಯ ರಕ್ಷಣೆಗಳನ್ನು ಕೊಡುತ್ತವೆ.

೧) ಜಾರಿಯಲ್ಲಿರುವ ಕಾಯ್ದೆಯನ್ನು ಉಲ್ಲಂಘಿಸಿದರೆ ಮಾತ್ರ ಗುರಿಯಾಗುತ್ತಾರೆ. ಪೂರ್ವಾನ್ವಯವಾಗಿ ಕಾಯ್ದೆಗಳನ್ನು ಜಾರಿಗೆ ತಂದು, ಹಿಂದಿನ ಅಪರಾಧಗಳಿಗೆ ಶಿಕ್ಷೆವಿಧಿಸುವಂತಿಲ್ಲ.

೨) ಒಂದೇ ಅಪರಾಧಕ್ಕೆ ಎರಡು ಬಾರಿ ಶಿಕ್ಷೆ ವಿಧಿಸುವಂತಿಲ್ಲ.

೩) ತನ್ನ ವಿರುದ್ಧ ತಾನೇ ಸಾಕ್ಷಿ ಹೇಳುವಂತೆ ಆರೋಪಿಯನ್ನು ಒತ್ತಾಯಪಡಿಸುವಂತಿಲ್ಲ.

೨೧ ನೇ ವಿಧಿಯ ಪ್ರಕಾರ ಕಾಯ್ದೆಯ ಆಧಾರವಿಲ್ಲದೇ ಯಾವುದೇ ವ್ಯಕ್ತಿಯ ಜೀವನ, ಸ್ವಾತಂತ್ರ್ಯ ಹಾಗೂ ಆಸ್ತಿಪಾಸ್ತಿಗಳಿಗೆ ಧಕ್ಕೆಯನ್ನುಂಟು ಮಾಡುವಂತಿಲ್ಲ. ಅಂದರೆ ನ್ಯಾಯಾಲಯದಲ್ಲಿ ಅಪರಾಧವು ಸಿದ್ಧವಾದಲ್ಲಿ ಮಾತ್ರ ಕಾಯ್ದೆಗೆ ತಕ್ಕ ನ್ಯಾಯಾಲಯವು ಶಿಕ್ಷೆ ವಿಧಿಸುತ್ತದೆ. ನಂತರ ಸರಕಾರವು ನ್ಯಾಯಾಲಯದ ತೀರ್ಪನ್ನು ಕಾರ್ಯರೂಪದಲ್ಲಿ ತರುತ್ತದೆ. ರದ

ಕ್ಷಣ

೨೨ ನೇ ವಿಧಿಯ ಪ್ರಕಾರ ಪ್ರತಿಬಂಧಕ ಕಾಯ್ದೆಯ ಡಿಯಲ್ಲಿ ಬಂಧಿಸಲ್ಪಟ್ಟ ವ್ಯಕ್ತಿಗೆ ಕೆಲವು ಹಕ್ಕುಗಳನ್ನು ಕೊಟ್ಟಿದೆ.

೧) ಬಂಧನದ ಕಾರಣಗಳನ್ನು ತಿಳಿಸದೇ ಬಂಧಿತರನ್ನು ಬದ್ಧತೆಯಲ್ಲಿಡಕೂಡದು. ಶವೆಂದರೆ,

೨) ಸ್ಥಾನಬದ್ಧತೆಯಲ್ಲಿಟ್ಟ ವ್ಯಕ್ತಿಯನ್ನು ೨೪ ಗಂಟೆಯಲ್ಲಿ ನವ ಸಮೀಪದ ಮ್ಯಾಜಿಸ್ಟ್ರೇಟರ ಮುಂದೆ ಹಾಜರಪ

೩) ಈ ರೀತಿ ಬಂಧಿಸಲ್ಪಟ್ಟ ವ್ಯಕ್ತಿಯನ್ನು ೩ ತಿಂಗಳು ಕಾಲ ಸ್ಥಾನಬದ್ಧತೆಯಲ್ಲಿಡುವಂತಿಲ್ಲ. ಕ್ಕಗಳು : ಎಲಕ ಈ ಹಕ್ಕನ್ನು

ಆದರೆ ಈ ಅನುಕೂಲತೆಯನ್ನು ನಿವಾರಕ ಬಂಧನದ ಕಾನೂನಿನ (Preventive Detention Act) ಪ್ರಕಾರ ಬಂಧಿತರಾಗಿರುವವರು ಅನುಭವಿಸಲು ಅವಕಾಶವಿಲ್ಲ.

೩)ಶೋಷಣೆಯ ವಿರುದ್ಧದ ಹಕ್ಕು: ಸಂವಿಧಾನದ ೨೩ ಹಾಗೂ ೨೪ ನೇ ವಿಧಿಗಳು ನಮಗೆ ಈ ಹಕ್ಕನ್ನು ದಯಪಾಲಿಸಿದೆ. ೨೩ ನೇ ವಿಧಿಯ ಪ್ರಕಾರ ಒತ್ತಾಯದ ಕೂಲಿಯನ್ನು ಹಾಗೂ ಕೂಲಿ ಕೊಡದ ಕೂಲಿಯನ್ನು ನಿಷೇಧಿಸುತ್ತದೆ. ೧೮ ವರ್ಷಕ್ಕಿಂತಲೂ ಕಡಿಮೆ ವರ್ಷದ ಹೆಣ್ಣುಮಕ್ಕಳನ್ನು ಕೊಳ್ಳುವದು ಮಾರುವದು ಮುಂತಾದವುಗಳನ್ನು ನಿಷೇಧಿಸಲಾಗಿದೆ. ವೇಶ್ಯಾವೃತ್ತಿಯನ್ನು ಈ ವಿಧಿ ನಿಷೇಧಿಸಿದೆ. ಇದಕ್ಕೆ ಅಪವಾದ ರೂಪದಲ್ಲಿ, ಸಾರ್ವಜನಿಕ ಪ್ರಯೋಜನಕ್ಕಾಗಿ ರಾಜ್ಯವು ಬಲವಂತವಾಗಿ ದುಡಿಮೆ ಮಾಡಿಸಿಕೊಳ್ಳಲು ಅವಕಾಶ ಕೊಡಲಾಗಿದೆ.

ನ ೨೪ ನೇ ವಿಧಿಯ ಪ್ರಕಾರ ೧೪ ವಯಸ್ಸಿನೊಳಗಿನ ಬಾಲಕ

ಎ) ಗಣಿ, ಕಾರಖಾನೆ, ಹಾಗೂ ಇನ್ನಿತರ ಅಪಾಯಕಾರೀ ಕೆಲಸ

ಬಿ) ತೊಡಗಿಸದಂತೆ ಪ್ರತಿಬಂಧಿಸಲಾಗಿದೆ. ಈ ವಿಷಯದಲ್ಲಿ ನಾವು

ಕಿಗಿಂತ ಮುಂದು ಎನ್ನಬಹುದು. ಏಕೆಂದರೆ ಇಂತಹ ವಿಧಿ

ಸಿ) ನ ಸಂವಿಧಾನದಲ್ಲಿ ಕಂಡು ಬರುವದಿಲ್ಲ.

ಡಿ) ಭ

ಇ) ದೇಶ ...ಾರ್ಮಿಕ ಹಕ್ಕು: ಸಂವಿಧಾನದ ೨೫ ರಿಂದ ೨೮ರ

ಎಫ್) ಆಸ್ತಿಯ ... ಈ ವಿಷಯವನ್ನೊಳಗೊಂಡಿವೆ. ೨೫ ನೇ ವಿಧಿ

ವಿಸರ್ಜ...ಜೆಗೂ ತನಗೆ ಒಪ್ಪಿಗೆಯಾದ ಧರ್ಮವನ್ನು

ಜಿ) ಯಾವುದೆ...ಸುವ ಹಾಗೂ ಪ್ರಚಾರ ಮಾಡುವ ಸ್ವಾತಂತ್ರ್ಯ

ವನ್ನು ನೀಡಿದೆ. ಆದರೆ ಇದರಿಂದ ಸಾರ್ವಜನಿಕ ಶಾಂತಿ ಆರೋಗ್ಯ ಹಾಗೂ ನೈತಿಕ ಮಟ್ಟ ಇವುಗಳಿಗೆ ಧಕ್ಕೆ ತಗಲದಂತೆ ನೋಡಿ ಕೊಳ್ಳಬೇಕು ಎಂದು ಹೇಳಲಾಗಿದೆ. ಈ ವಿಧಿ ಭಾರತೀಯ ಭೂಮಿಯಲ್ಲಿ ಜಾತ್ಯಾತೀತತೆಯನ್ನು ಸ್ಥಾಪಿಸಿತು.

೨೬ ನೇ ವಿಧಿಯ ಪ್ರಕಾರ ಧಾರ್ಮಿಕ ಪಂಥಗಳು ತಮ್ಮ ಧರ್ಮ ಸಂಸ್ಥೆಗಳನ್ನು ಸ್ಥಾಪಿಸಿಕೊಂಡು ಆ ಮೂಲಕ ಆಸ್ತಿಪಾಸ್ತಿ ಗಳನ್ನು ಹೊಂದುವ ಹಕ್ಕನ್ನು ಪಡೆದಿವೆ.

೨೭ ನೇ ವಿಧಿಯ ಪ್ರಕಾರ ವ್ಯಕ್ತಿಗಳು ತಮ್ಮ ಧರ್ಮವನ್ನು ರಕ್ಷಿಸಿಕೊಂಡು ಹೋಗಲು ಹಾಗೂ ಪ್ರಚಾರ ಮಾಡಲು ಯಾರೂ ತೆರಿಗೆಗಳನ್ನು ಕೊಡಬೇಕಾಗಿಲ್ಲ.

೨೮ ನೇ ವಿಧಿಯ ಪ್ರಕಾರ ಸರಕಾರದ ಸಹಾಯಧನದ ಮೂಲಕ ನಡೆಯುವ ಶಿಕ್ಷಣ ಸಂಸ್ಥೆಗಳಲ್ಲಿ ಧರ್ಮ ಪ್ರಚಾರದ ಶಿಕ್ಷಣ ಕೊಡುವಂತಿಲ್ಲ. ಆದರೆ ಆರ್ಥಿಕವಾಗಿ ಸ್ವಯಂ ಶಿಕ್ಷಣ ಪರಿಪೂರ್ಣವಾಗಿರುವ ಶಿಕ್ಷಣ ಸಂಸ್ಥೆಗಳಲ್ಲಿ ಧಾರ್ಮಿಕ ಬೋಧನೆ ನೀಡುವ ಬಗ್ಗೆ ಈ ವಿಧಿಯಲ್ಲಿ ಯಾವ ಪ್ರಸ್ತಾಪವೂ ಇಲ್ಲ.

ಒಟ್ಟಿನಲ್ಲಿ ಈ ಹಕ್ಕಿನ ಮುಖ್ಯ ಉದ್ದೇಶವೆಂದರೆ, ಜಾತ್ಯಾತೀತ ರಾಷ್ಟ್ರವನ್ನು ಸ್ಥಾಪಿಸಿ, ಧರ್ಮದ ಹೆಸರಿನಲ್ಲಿ ನಡೆ ಯುವ ಶೋಷಣೆಯನ್ನು ತಪ್ಪಿಸುವದೇ ಆಗಿದೆ.

೫) ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಹಕ್ಕುಗಳು :

೨೯ ಹಾಗೂ ೩೦ ನೇ ವಿಧಿಗಳ ಮೂಲಕ ಈ ಹಕ್ಕನ್ನು

ನಮಗೆ ನೀಡಲಾಗಿದೆ. ಈ ಹಕ್ಕನ್ನು ನೀಡಿರುವದರ ಪ್ರಮುಖ ಉದ್ದೇಶವೆಂದರೆ ನಾಗರಿಕರ, ಆದರಲ್ಲೂ ವಿಶೇಷವಾಗಿ ಅಲ್ಪ ಸಂಖ್ಯಾತರ ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಹಿತಾಸಕ್ತಿಗಳನ್ನು ಕಾಪಾಡುವುದೇ ಆಗಿದೆ.

೨೯ ನೇ ವಿಧಿಯ ಪ್ರಕಾರ ಅಲ್ಪಸಂಖ್ಯಾಕರು ತಮ್ಮ ಭಾಷೆ ಹಾಗೂ ಸಂಸ್ಕೃತಿಯನ್ನು ರಕ್ಷಿಸಿಕೊಂಡು ಹೋಗುವ ಹಾಗೂ ಅಭಿವೃದ್ಧಿ ಪಡಿಸಿಕೊಳ್ಳುವ ಹಕ್ಕನ್ನು ಪಡೆದುಕೊಂಡಿದ್ದಾರೆ.

ಸರಕಾರದಿಂದ ಧನಸಹಾಯ ಪಡೆದುಕೊಳ್ಳುವ ಶಿಕ್ಷಣ ಸಂಸ್ಥೆಗಳು ಪ್ರವೇಶ ನೀಡುವಾಗ ಜಾತಿ, ಮತ, ಭಾಷೆ. ಮೊದಲಾದವುಗಳ ಆಧಾರದ ಮೇಲೆ ಭೇದಭಾವ ಮಾಡುವಂತಿಲ್ಲ.

೩೦ ನೇ ವಿಧಿಯು ಪ್ರಕಾರ ಸರಕಾರವು ಇಂತಹ ಸಂಸ್ಥೆಗಳಿಗೆ ಧನ ಸಹಾಯ ನೀಡುವಾಗ ಧರ್ಮ, ಭಾಷೆ ಅಥವಾ ಇನ್ನಾವುದೇ ಆಧಾರದ ಮೇಲೆ ಭೇದ ಭಾವ ಮಾಡಕೂಡದೆಂದು ಹೇಳಲಾಗಿದೆ,

೬) ಈ ಮೊದಲು ಆಸ್ತಿಯ ಹಕ್ಕು ಮೂಲಭೂತ ಹಕ್ಕು ಗಳಲ್ಲೊಂದಾಗಿತ್ತು. ಸಂವಿಧಾನದ ೪೪ ನೇ ತಿದ್ದುಪಡಿಯು ಈ ಹಕ್ಕನ್ನು ಮೂಲಭೂತ ಹಕ್ಕುಗಳ ಪಟ್ಟಿಯಿಂದ ತೆಗೆದುಹಾಕಿತು ಈಗ ನಮಗಿರುವ ಆಸ್ತಿಯ ಹಕ್ಕು ಶಾಸನೀಯ ಹಕ್ಕಾಗಿದೆ.

೬) ಸಂವಿಧಾನಾತ್ಮಕ ಪರಿಹಾರಗಳ ಹಕ್ಕು:

ಹೋಲಕ್ಕೆ ಬೇಲಿ ಇರುವ ಹಾಗೆ ೩೨ ನೇ ವಿಧಿ ನಮ್ಮ ಮೂಲ ಭೂತ ಹಕ್ಕುಗಳ ಸಂರಕ್ಷಣೆಯನ್ನು ಮಾಡುತ್ತದೆ. ಮೂಲಭೂತ ಹಕ್ಕುಗಳನ್ನು ಕೊಟ್ಟು ಅವುಗಳಿಗೆ ಧಕ್ಕೆ ಬರದಂತೆ ನೋಡಿಕೊಳ್ಳು ವದು ಅತ್ಯಾವಶ್ಯಕ. ಡಾ. ಬಿ. ಆರ್. ಅಂಬೇಡಕರ ವಿಧಿಯನ್ನು ಸಂವಿಧಾನದ ಹೃದಯವೆಂದು ಕರೆದಿದ್ದಾರೆ.

ಕೇಂದ್ರ ಅಥವಾ ರಾಜ್ಯ ಸರಕಾರ ನಮ್ಮ ಮೂಲಭೂತ ಹಕ್ಕುಗಳನ್ನು ಮೊಟಕುಗೊಳಿಸಿದಾಗ ಅವುಗಳನ್ನು ರಕ್ಷಿಸಿಕೊಳ್ಳಲು ನಾವು ನ್ಯಾಯಾಲಯಗಳ ಆಶ್ರಯ ಪಡೆಯಬಹುದು. ಅಂದರೆ ಇದು ಹಕ್ಕುಗಳಿಗೆ ರಕ್ಷಣೆ ಕೊಡುವ ಹಕ್ಕಾಗಿದೆ ಎನ್ನಬಹುದು.

ಶಾಸಕಾಂಗವು ರೂಪಿಸಿದ ಕಾಯ್ದೆಗಳಾಗಲೀ ಅಥವಾ ಕಾರ್ಯಾಂಗ ಹೊರಡಿಸಿದ ಆಜ್ಞೆಗಳಾಗಲೀ ನಮ್ಮ ಮೂಲಭೂತ ಹಕ್ಕುಗಳನ್ನು ಉಲ್ಲಂಘಿಸಿದಾಗ ವರಿಷ್ಠ ನ್ಯಾಯಾಲಯವು ಆ ಹಕ್ಕು ಗಳನ್ನು ಸಂರಕ್ಷಿಸಲು ಕೆಲವು ಆಜ್ಞೆಗಳನ್ನು ಹೊರಡಿಸುತ್ತದೆ. ಅವುಗಳೆಂದರೆ "ಹೆಬಿಯಸ್ ಕಾರ್ಪಸ್" "ಮ್ಯಾಂಡಮಸ್" "ಸರ್ಟಿಯೋರರಿ" "ಕೋವಾರಂಟೊ" "ಪ್ರೊಹಿಬಿಶನ್" ಈ ಸಂವಿಧಾನಾತ್ಮಕ ಪರಿಹಾರ ಮಾರ್ಗಗಳನ್ನು ಸಂವಿಧಾನದ ಕಣ್ಣು ಎಂದು ಕರೆಯಬಹುದು. ಮನುಷ್ಯನಿಗೆ ಕಣ್ಣುಗಳು ಮುಖ್ಯ ವಾಗಿರುವಂತೆ ಪೌರರ ಮೂಲಭೂತ ಹಕ್ಕುಗಳಿಗೆ ಈ ಸಂವಿಧಾ ನಾತ್ಮಕ ಪರಿಹಾರಗಳ ಹಕ್ಕು ಇದೆ ಎನ್ನಬಹುದು.

ಕ ರ್ತ ವ್ಯ ಗ ಳು

ಹಕ್ಕು ಮತ್ತು ಕರ್ತವ್ಯಗಳು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಮನುಷ್ಯನನ್ನು ಆತನ ನೆರಳು ಹಿಂಬಾಲಿಸುವಂತೆ, ಕರ್ತವ್ಯಗಳು ಹಕ್ಕುಗಳನ್ನು ಹಿಂಬಾಲಿಸುತ್ತವೆ. ಹಕ್ಕು ಮತ್ತು ಕರ್ತವ್ಯಗಳ ಪರಿಜ್ಞಾನವನ್ನು ಜನರಲ್ಲಿ ಪ್ರಚುರಗೊಳಿಸಲೆಂದೇ ಸಂಯುಕ್ತ ರಾಷ್ಟ್ರ ಸಂಘ ಪ್ರತಿವರ್ಷ ಡಿಸೆಂಬರ ೧೦ ರಂದು ಮಾನವೀಯ ಹಕ್ಕುಗಳ ದಿನಾಚರಣೆ ಮಾಡುತ್ತಿದೆ. ಯಾವುದೇ ರಾಷ್ಟ್ರ ಅಭಿವೃದ್ಧಿಗೊಳ್ಳಬೇಕಾದರೆ ಅಲ್ಲಿಯ ಪ್ರಜೆ "ದೇಶದಿಂದ ತಾನೇನು ಪಡೆದೆ" ಎಂಬುದರ ಬಗೆಗೆ ಹೆಚ್ಚು ವಿಚಾರ ಮಾಡದೇ " ದೇಶಕ್ಕೆ ತಾನೇನು ಕೊಟ್ಟೆ.? ಎಂದು ತನ್ನನ್ನು ತಾನೇ ಪ್ರಶ್ನಿಸಿಕೊಳ್ಳುವದು ಅವಶ್ಯವಿದೆ. ವ್ಯಕ್ತಿ ಪಡೆದುಕೊಂಡ ಹಕ್ಕುಗಳಿಗೆ ಪ್ರತಿಯಾಗಿ ಸಮಾಜಕ್ಕೆ ಸಹಾಯಕ ಮಾಡುವದು ಅಗತ್ಯವಾಗಿರುತ್ತದೆ.

ಪೌರ ಸಮಾಜಕ್ಕೆ ಕಡ್ಡಾಯವಾಗಿ ಸಲ್ಲಿಸಬೇಕಾಗಿರುವ ಋಣವನ್ನು ಕರ್ತವ್ಯಗಳನ್ನಬಹುದು. ನಮ್ಮ ಕರ್ತವ್ಯದಲ್ಲಿಯೇ ಇನ್ನೊಬ್ಬರ ಹಕ್ಕುಗಳು ಕೂಡಾ ಅಡಗಿರುತ್ತವೆ ಎಂಬುದನ್ನು ನಾವು ಅರಿಯಬೇಕಾಗಿದೆ. ಕರ್ತವ್ಯಗಳಿಲ್ಲದ ಹಕ್ಕುಗಳೆಂದರೆ ಮದುಮಗನಿಲ್ಲದ ಮದುವೆಯಂತೆ.

ನಮ್ಮ ಮೂಲ ಸಂವಿಧಾನದಲ್ಲಿ ನಾವು ಮಾಡಬೇಕಾದ ಕರ್ತವ್ಯಗಳ ಪಟ್ಟಿಯೇ ಇದ್ದಿರಲಿಲ್ಲ. ಇದರ ಅವಶ್ಯಕತೆಯನ್ನು ಮನಗಂಡು ಸಂಸತ್ತು ಈ ಬಗೆಗೆ ಸಂವಿಧಾನಕ್ಕೆ ೪೨ನೇ ತಿದ್ದುಪಡಿ

ಮಾಡಿತು. (ಲೋಕಸಭೆಯಲ್ಲಿ ೨-೧೧-೭೬ ರಂದು ಹಾಗೂ ರಾಜ್ಯ ಸಭೆಯಲ್ಲಿ ೧೧-೧೧-೭೬ ರಂದು) ಅದಕ್ಕೆ ರಾಷ್ಟ್ರಪತಿಗಳು ೧೮-೧೨-೭೬ ರಂದು ಅಂಕಿತ ಹಾಕಿದರು. ಅದರನ್ವಯ ನಾವೆಲ್ಲಾ ಸಂವಿಧಾನದ ೪೨ ನೇ ತಿದ್ದುಪಡಿಯ ಮೂಲಕ ಕೆಳಕಂಡ ೧೦ ಮೂಲಭೂತ ಕರ್ತವ್ಯಗಳನ್ನು ಮಾಡಬೇಕೆಂದು ಸಂವಿಧಾನದ ೪-ಎ ಭಾಗದಲ್ಲಿ ಹೇಳಲಾಗಿದೆ.

೧) ಸಂಧಾನ, ರಾಷ್ಟ್ರಧ್ವಜ ಹಾಗೂ ರಾಷ್ಟ್ರಗೀತೆಯನ್ನು ಗೌರವಿಸುವದು.

೨) ಸ್ವಾತಂತ್ರ್ಯ ಹೋರಾಟದ ಆದರ್ಶಗಳನ್ನು ಆದರಿಸುವದು.

೩) ಭಾರತದ ಸಾರ್ವಭೌಮತ್ವ ಏಕತೆ ಮತ್ತು ಸಮಗ್ರತೆಯನ್ನು ಎತ್ತಿಹಿಡಿಯುವದು ಹಾಗೂ ರಕ್ಷಿಸುವದು.

೪) ಕರೆಯಿತ್ತಾಗ ರಾಷ್ಟ್ರ ರಕ್ಷಣೆ ಹಾಗೂ ಸೇವೆಗೆ ಸಿದ್ಧವಾಗಿರುವದು.

೫) ಎಲ್ಲ ಭಾರತೀಯರಲ್ಲೂ ಸಮಾನವಾದ ಭ್ರಾತೃತ್ವ ಭಾವನೆಯನ್ನು ಬೆಳೆಸುವದು ಹಾಗೂ ಮಹಿಳೆಯರ ಗೌರವಕ್ಕೆ ಕುಂದುತರುವ ಪದ್ಧತಿಗಳನ್ನು ಕೊನೆಗಾಣಿಸುವದು.

೬) ಸ್ವಾಭಾವಿಕ ಪರಿಸರದ ರಕ್ಷಣೆ ಹಾಗೂ ಜೀವಿಗಳ ಬಗ್ಗೆ ಸಹಾನುಭೂತಿ.

೭) ಪ್ರತಿಯೊಬ್ಬ ನಾಗರಿಕನು ವೈಜ್ಞಾನಿಕ ದೃಷ್ಟಿ ಮಾನಿವೀಯತೆ ಹಾಗೂ ಸುಧಾರಣಾ ಮನೋವೃತ್ತಿಯನ್ನು ಬೆಳೆಸಿಕೊಳ್ಳಬೇಕು.

೮) ಹಿಂಸಾಚರಣೆ ತೊರೆದು ಸಾರ್ವಜನಿಕ ಆಸ್ತಿಯನ್ನು ಸಂರಕ್ಷಿಸುವದು.

೯) ಎಲ್ಲ ವೈಯಕ್ತಿಕ ಹಾಗೂ ಸಂಘಟಿತ ಚಟುವಟಿಕೆಗಳು ಶ್ರೇಷ್ಠ ಮಟ್ಟದಲ್ಲಿ ಇರುವಂತೆ ನೋಡಿಕೊಳ್ಳಬೇಕು.

೧೦) ನಮ್ಮ ದೇಶದ ವೈವಿಧ್ಯಮಯವಾದ ಸಂಸ್ಕೃತಿಯನ್ನು ರಕ್ಷಿಸುವದು.

ಕೊನೆಯ ಮಾತು

ಮೇಲೆ ವಿವರಿಸಿದ ಅಂಶಗಳನ್ನು ನಮ್ಮ ಗ್ರಾಮೀಣ ಜನತೆ ಆದಷ್ಟು ಬೇಗ ಅರಿತುಕೊಂಡು, ಅವುಗಳನ್ನು ಇನ್ನು ಕೆಲವೇ ವರ್ಷಗಳಲ್ಲಿ ಕಾರ್ಯರೂಪಕ್ಕೆ ತಂದು ಪ್ರಜಾಪ್ರಭುತ್ವವನ್ನು ಯಶಸ್ವಿಗೊಳಿಸಿ ತನ್ಮೂಲಕ ತಮ್ಮೆಲ್ಲರ ಹಾಗೂ ದೇಶದ ಕಲ್ಯಾಣ ಸಾಧಿಸಿಕೊಳ್ಳಬಲ್ಲರೆಂದು ಹಾರೈಸುತ್ತೇನೆ.

ಉಪನ್ಯಾಸ ಗ್ರಂಥಮಾಲೆಯ ಕೆಲವು ಪ್ರಕಟನೆಗಳು

೧ ಗ್ರಾಮಾಂತರ ಪ್ರದೇಶದ ಮಾರುಕಟ್ಟೆಯ ಮಹತ್ವ
-ಎ. ಆರ್. ರೊಟ್ಟಿ

೨ ಬದಲಾಗುತ್ತಿರುವ ಭಾರತೀಯ ಗ್ರಾಮ
-ಎಚ್. ವ್ಹಿ. ನಾಗೇಶ

೩ ಹಳ್ಳಿಯ ಬೃಹತ್ ಯೋಜನೆ
-ಎಮ್. ಎಸ್. ಹುಲ್ಲೋಳಿ

೪ ಕಲ್ಯಾಣ ರಾಜ್ಯದ ಕಲ್ಪನೆ
-ಆರ್. ವ್ಹಿ. ಹೊರಡಿ

೫ ಗ್ರಾಮಾಂತರ ಪ್ರದೇಶಗಳಲ್ಲಿ ರಾಷ್ಟ್ರೀಕೃತ-ಬ್ಯಾಂಕುಗಳ ಪಾತ್ರ
-ಎ. ಎಂ. ಯರನಾಳ

೬ ಭಾರತದಲ್ಲಿ ಸುಶಿಕ್ಷಿತ ನಿರುದ್ಯೋಗ ಸಮಸ್ಯೆ
-ಟಿ. ಸೋಮಶೇಖರ

೭ ನೇಕಾರಿಕೆ ಮತ್ತು ಸರಕಾರ
-ಈರಣ್ಣ ಹಟ್ಟಿ

೮ ಸರ್ವೋದಯ ಹಾಗೂ ಜನಕಲ್ಯಾಣ
-ಎಂ. ಎಸ್. ಬಡಕಲಿ

೯ ಪಂಚಾಯತ ಆಡಳಿತ ಸಾಧಕ-ಬಾಧಕಗಳು
-ವಸಂತ ಪಾಟೀಲ

೧೦ ಕುಟುಂಬ ಯೋಜನೆ ಹಾಗೂ ಮೂಢನಂಬಿಕೆಗಳು
-ಎಸ್. ಎಂ. ನರಗುಂದ

ಪ್ರಸಾರಾಂಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ